

SARAYU - Kannada Monthly Regn. No. KARKAN/2014/62363
October Vol. : 13 Issue : 5 5128/ ಪರಾಭವ ಸಂವತ್ಸರ ಅಕ್ಟೋಬರ್ 2026 ಪುಟ 12 **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

ಶ್ರೀರಾಮ ವಿದ್ಯಾಕೇಂದ್ರಕ್ಕೆ ಖ್ಯಾತ ಶಿಕ್ಷಣ ತಜ್ಞ, ವಾಗ್ಮಿ ಡಾ । ಗುರುರಾಜ ಕರಜಗಿ ಭೇಟಿ

18.09.2026

ವಿಶೇಷ ಉಪನ್ಯಾಸ



ಶ್ರೀರಾಮ ವಿದ್ಯಾಕೇಂದ್ರ, ಕಲ್ಲಡ್ಕದಲ್ಲಿ ಎಸ್. ಎಲ್ ಭೈರಪ್ಪ ಪ್ರತಿಷ್ಠಾನ (ರಿ) ಇದರ ಸಹಯೋಗದಲ್ಲಿ ಪದ್ಮಭೂಷಣ ಡಾ. ಎಸ್. ಎಲ್ ಭೈರಪ್ಪನವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ "ಡಾ. ಎಸ್ ಎಲ್ ಭೈರಪ್ಪ– ಒಂದು ನೆನಪು" ವಿಶೇಷ ಉಪನ್ಯಾಸ ಶಂಕರಾಚಾರ್ಯ ಸಭಾಂಗಣದಲ್ಲಿ ನಡೆಯಿತು. ಖ್ಯಾತ ವಾಗ್ಮಿಗಳು, ಶಿಕ್ಷಣ ತಜ್ಞರು ಮತ್ತು ಸೃಜನಶೀಲ ಅಧ್ಯಾಪನಕೇಂದ್ರ ಬೆಂಗಳೂರು ಇದರ ಮುಖ್ಯಸ್ಥರಾದ ಡಾ. ಗುರುರಾಜ ಕರಜಗಿ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮೊದಲ ಅವಧಿಯಲ್ಲಿ ಶಿಕ್ಷಕರಿಗಾಗಿ "ಶಿಕ್ಷಕನ ಮನೋಭೂಮಿಕೆ" ಹಾಗೂ ಎರಡನೇ ಅವಧಿಯಲ್ಲಿ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ಜೀವನವೊಂದು ಸಾಧನಾಪಥ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ವಿದ್ಯಾಕೇಂದ್ರದ ಸಂಸ್ಥಾಪಕರು ಡಾ. ಪ್ರಭಾಕರ . ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಸ್ತಾವನಾ ನುಡಿಗಳನ್ನಾಡಿದರು. ವಿದ್ಯಾಕೇಂದ್ರದ ಅಧ್ಯಕ್ಷರು ಶ್ರೀ ನಾರಾಯಣ ಸೋಮಯಾಜಿ ಹಾಗೂ ಸಂಚಾಲಕ ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಗಣ್ಯರನ್ನು ಸ್ವಾಗತಿಸಿದರು. ಪ್ರಾಥಮಿಕ ವಿಭಾಗದ ಪ್ರೀತಾ ಮಾತಾಜಿ ಕಾರ್ಯಕ್ರಮ ನಿರ್ವಹಿಸಿ ವಂದನಾರ್ಪಣೆಗೈದರು.



ಡಾ। ಎಸ್.ಎಲ್. ಭೈರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಭೈರಪ್ಪರವರ ಆತ್ಮಕಥನ – 'ಭಿತ್ತಿ' ಆಧಾರಿತ ಗೋಷ್ಠಿ ನಡೆಯಿತು.



ಶಿಕ್ಷಕರಿಗಾಗಿ:

'ಶಿಕ್ಷಕನ ಮನೋಭೂಮಿಕೆ' ವಿಷಯದ ಮೇಲೆ ಮಾತನಾಡುತ್ತಾ, ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ತತ್ವಜ್ಞಾನ್ನಿ ಮತ್ತು ಮಾರ್ಗದರ್ಶಕರಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ವಿವರಿಸಿದರು.

ವಿದ್ಯಾರ್ಥಿಗಳಿಗಾಗಿ:

'ವಿದ್ಯಾರ್ಥಿ ಜೀವನವೊಂದು ಸಾಧನಾಪಥ' ಎಂಬ ವಿಷಯದಲ್ಲಿ ಮಾತನಾಡುತ್ತಾ, ವಿದ್ಯಾರ್ಥಿಗಳು ಶ್ರಮ ಮತ್ತು ಏಕಾಗ್ರತೆಯಿಂದ ಗುರಿ ತಲುಪುವ ಮಹತ್ವವನ್ನು ಪ್ರಸ್ತಾಪಿಸಿದರು.






ಶ್ರೀರಾಮ ಮಂದಿರ ಕಲ್ಲಡ್ಕದ
ವತಿಯಿಂದ ನಡೆಯುವ ಶ್ರೀಕೃಷ್ಣ ಜನ್ಮಾಷ್ಟಮಿಯ ಮೊಸರು ಕುಡಿಕೆ ಉತ್ಸವದ
ಶೋಭಾಯಾತ್ರೆಯಲ್ಲಿ ವಿದ್ಯಾಕೇಂದ್ರದ ಶಿಶುಮಂದಿರ ಮತ್ತು 1 ರಿಂದ 4ನೇ ತರಗತಿ
ವಿದ್ಯಾರ್ಥಿಗಳು ಕೃಷ್ಣ–ರಾಧೆ ವೇಷ ಧರಿಸಿ ಪೋಷಕರೊಂದಿಗೆ ಭಾಗವಹಿಸಿದರು.

96 ತಂಡಗಳ ಕುಣಿತ ಭಜನೆ

ಶ್ರೀರಾಮ ಮಂದಿರ ಕಲ್ಲಡ್ಕದ ವತಿಯಿಂದ ನಡೆಯುವ
ಗಣೇಶೋತ್ಸವದ ನಿಮಿತ್ತ ನಡೆದ ಶೋಭಾಯಾತ್ರೆಯಲ್ಲಿ
ಶ್ರೀರಾಮ ವಿದ್ಯಾಕೇಂದ್ರದ 96 ತಂಡಗಳ
1536 ವಿದ್ಯಾರ್ಥಿಗಳ ಕುಣಿತ ಭಜನೆಯ ಸುಂದರ ನೋಟ



ಹೊರಸಂಚಾರ 24.9.2026

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಮತ್ತು ಅಕ್ಕಮಹಾದೇವಿ ಶಿಶು ಮಂದಿರ ಬಿ.ಸಿ ರೋಡ್ ಈ ಎರಡು ಶಿಶುಮಂದಿರದ ಮಕ್ಕಳ ಹೊರಸಂಚಾರ ಕುದ್ರೋಳಿ, ಕದ್ರಿ ದೇವಸ್ಥಾನ ಕದ್ರಿ ಪಾರ್ಕಿಗೆ ಆಯೋಜಿಸಲಾಗಿತ್ತು 42 ಮಕ್ಕಳು 4 ಮಾತಾಜಿಯರು ಭಾಗವಹಿಸಿದರು.



ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರಣೆ 5.9.2026

ಡಾ। ಸರ್ವಪಲ್ಲಿ ರಾಧಾಕೃಷ್ಣನ್ ಭಾವಚಿತ್ರಕ್ಕೆ ಶಿಕ್ಷಕರು ಪುಷ್ಪಾರ್ಚನೆ ಮಾಡಿದರು. ಶ್ರೀ ಗೋಪಾಲ ಶ್ರೀಮಾನ್ ಶಿಕ್ಷಕರ ದಿನಾಚರಣೆಯ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ಪ್ರೇರಣಾ ಗೀತೆ ಹಾಡಿದರು. ವಿದ್ಯಾರ್ಥಿಗಳಾದ ಭೂಮಿಕಾ ಮತ್ತು ಚಿರಂತ್ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು.



ಪ.ಪೂ ವಿದ್ಯಾಲಯ–ಶಿಕ್ಷಕರ ದಿನಾಚರಣೆ 5.9.26

ಡಾ। ಸರ್ವಪಲ್ಲಿ ರಾಧಾಕೃಷ್ಣನ್ ಭಾವಚಿತ್ರಕ್ಕೆ ಶಿಕ್ಷಕರು ಪುಷ್ಪಾರ್ಚನೆ ಮಾಡಿದರು. ದ್ವಿ. ವಾಣಿಜ್ಯ ವಿಭಾಗದ ತೃಪ್ತಿ, ಅವರ ಜೀವನ ಚರಿತ್ರೆಯ ತಿಳಿಸಿದರು. ದ್ವಿ ವಾಣಿಜ್ಯ ವಿಭಾಗದ ಕೀರ್ತಿ ಎಸ್ ಗುರುವಿನ ಮಹತ್ವದ ಪ್ರೇರಣಾ ಗೀತೆ ಹಾಡಿದರು. ಭರತ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳು ಎಲ್ಲಾ ಉಪನ್ಯಾಸಕ ಮತ್ತು ಉಪನ್ಯಾಸಕೇತರರಿಗೆ ಹೂವನ್ನು ನೀಡಿ ಗೌರವಿಸಿದರು.



ಭಗೀರಥ ಮಾನವಿಕ ಸಂಘ 09.09.2026

ಪ್ಲಾಸ್ಟಿಕ್ ಮುಕ್ತ ಜಾಗೃತಿ ಕಾರ್ಯಕ್ರಮವು ಗೊಳ್ತಮಜಲು ಗ್ರಾಮ ಪಂಚಾಯತ್, ಬಾಳ್ತಿಲ ಗ್ರಾಮ ಪಂಚಾಯತ್ ಹಾಗೂ ಲಯನ್ಸ್ ಕ್ಲಬ್ ಅಮ್ಟೂರು, ಹಸಿರು ದಳ ಮತ್ತು ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಸಹಯೋಗದೊಂದಿಗೆ ಪ್ಲಾಸ್ಟಿಕ್ ನಿಂದ ಸ್ವಾತಂತ್ರ್ಯದ ಬಗ್ಗೆ ಮಾಹಿತಿ ಮತ್ತು ಜಾಥಾವನ್ನು ನಡೆಸಲಾಯಿತು.



5.9.2026 ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನ ನರಿಕೊಂಬು ಇಲ್ಲಿ ನಡೆದ 58ನೇ ವರ್ಷದ ಮೊಸರು ಕುಡಿಕೆ ಉತ್ಸವದಲ್ಲಿ ಸರಸ್ವತಿ ಶಿಶುಮಂದಿರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮುದ್ದು ಕೃಷ್ಣನನ್ನು ತೊಟ್ಟಿಲಲ್ಲಿ ಮಲಗಿಸುವ ಕಾರ್ಯಕ್ರಮದಲ್ಲಿ 18 ಮಕ್ಕಳು ಭಾಗವಹಿಸಿದರು.



ಶಾಲಾ ಶೈಕ್ಷಣಿಕ ಪರಿವೀಕ್ಷಣೆ : 1.09.2026

ಪ್ರಾಥಮಿಕ ವಿಭಾಗಕ್ಕೆ ವಿವೇಕಾನಂದ ವಿದ್ಯಾವರ್ಧಕ ಸಂಘದ ಶೈಕ್ಷಣಿಕ ಪರಿವೀಕ್ಷಕರು ಭೇಟಿ ನೀಡಿದರು. ಶಾಲೆ ಹಾಗೂ ಶಿಕ್ಷಕರನ್ನು ಪರಿವೀಕ್ಷಣೆ ಮಾಡಿ ಶಿಕ್ಷಕರಿಗೆ ಮಾರ್ಗದರ್ಶನ ಮಾಡಿದರು.



NCC ತಂಡದಿಂದ ಸ್ವಚ್ಛತಾ ಕಾರ್ಯ

ಪ್ರೌಢಶಾಲೆ ಕಲ್ಲಡ್ಕದ ಎನ್.ಸಿ.ಸಿ ಘಟಕ ಮತ್ತು ವಿದ್ಯಾಭಾರತಿ ಕರ್ನಾಟಕ ವತಿಯಿಂದ ಮಂಗಳೂರಿನ ಸೋಮೇಶ್ವರ ಕಡಲ ತೀರದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು. ಎನ್.ಸಿ.ಸಿ ಘಟಕದ 93 ವಿದ್ಯಾರ್ಥಿಗಳು ಭಾಗವಹಿಸಿದರು.



ಪ್ರಾಥಮಿಕ ಶಾಲೆ–ಶಿಕ್ಷಕರ ದಿನಾಚರಣೆ 5.9.2026

ಪ್ರಾಥಮಿಕ ಶಾಲಾ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರಿಗೆ ವಿವಿಧ ರೀತಿಯ ಸ್ಪರ್ಧೆಗಳು ವಿದ್ಯಾರ್ಥಿಗಳು ನಡೆಸಿದರು. ಬಳಿಕ ಶಿಕ್ಷಕರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಮುಖ್ಯೋಪಾಧ್ಯಾಯರು, ಎಲ್ಲಾ ಶಿಕ್ಷಕರು ಭಾಗವಹಿಸಿದರು.



ಅತಿಥಿಗಳ ಬೇಟಿ : 22.09.2026

ಪ್ರಾಥಮಿಕ ವಿಭಾಗಕ್ಕೆ ಮಹಾರಾಷ್ಟ್ರದ ಸಂದೀಪ್ ಮಹೀಂದ್ ಜೀ , C.A ಸತೀಶ್ಚಂದ್ರ ಕಾಳ್ವರ್ಕರ್, ಉಡುಪಿ ಸಂಘಚಾಲಕರು ಮುರಳೀಧರ ಉಲ್ಲೂರ ಶಾಲೆಗೆ ಭೇಟಿ ಕೊಟ್ಟು ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸಿದರು. ಸಂಸ್ಥೆಯ ಹಿರಿಯರಾದ ಪ್ರಭಾಕರ್ ಭಟ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಶ್ರೀಮಾನ್ ಉಪಸ್ಥಿತರಿದ್ದರು.

ಉತ್ಕರ್ಷ್ 2026 – 10.09.2026

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ವತಿಯಿಂದ ಶ್ರೀರಾಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ "ಉತ್ಕರ್ಷ್ 2026" ಫೆಸ್ಟ್ ಕಾರ್ಯಕ್ರಮವು ಮೋಂತಿಮಾರು ದುರ್ಗಾಪರಮೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಮೋಂತಿಮಾರು ಇದರ ಆಡಳಿತ ಸಹ ಮೊಕ್ತೇಸರರು ಹಾಗೂ ಸಂತ ಅಲೋಶಿಯಸ್ ಕಾಲೇಜು, ಮಂಗಳೂರು ಇದರ ನಿವೃತ್ತ ಪ್ರಾಧ್ಯಾಪಕರಾದ ಡಾ. ಮುಕುಂದ ಪ್ರಭು ಇವರು ಶುಭ ಹಾರೈಸಿದರು. ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ದೇವಕಿ, ಶ್ರೀರಾಮ ಪದವಿ ವಿಭಾಗದ ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿ ಶ್ರೀ ಸುರೇಶ್ ರೈ ಇರಾ, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯ ಶ್ರೀ ಧೀರಜ್ ಬಲ್ಲೆಕೋಡಿ, ಮೋಂತಿಮಾರು ದೇವಸ್ಥಾನದ ವ್ಯವಸ್ಥಾಪಕರಾದ ಶ್ರೀ ಅಶೋಕ್ ನಾಡಾಜೆ, ಶ್ರೀರಾಮ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಹಾಗೂ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಕಾರ್ಯಕ್ರಮದ ಸಂಯೋಜಕರಾದ ಕು. ನವಿತ ಹಾಗೂ ಸಹಸಂಯೋಜಕರಾದ ಕು. ಅನನ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ವತಿಯಿಂದ ವಿದ್ಯಾರ್ಥಿಗಳಿಗಾಗಿ ವಿವಿಧ ಮನೋರಂಜನಾತ್ಮಕ ಆಟಗಳನ್ನು ನಡೆಸಿ ಬಹುಮಾನಗಳನ್ನು ವಿತರಿಸಲಾಯಿತು. ಸಮಾರೋಪದಲ್ಲಿ ದೇವಸ್ಥಾನದ ವ್ಯವಸ್ಥಾಪಕರಾದ ಶ್ರೀ ಅಶೋಕ್ ನಾಡಾಜೆ ದಂಪತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದು ಬಹುಮಾನ ವಿತರಿಸಿದರು. ಉಪ ಪ್ರಾಂಶುಪಾಲರಾದ ಯತಿರಾಜ್ ಪೆರಾಜೆ ಹಾಗೂ ಶ್ರೀಮತಿ ಸುಕನ್ಯಾ, ಬಿಕಾಂ ವಿಭಾಗ ಮುಖ್ಯಸ್ಥೆ ಕು. ದೀಕ್ಷಿತಾ, ಬಿಸಿಎ ವಿಭಾಗದ ಮುಖ್ಯಸ್ಥೆ ಶ್ರೀಮತಿ ತೃಪ್ತಿ, ಬಿಎ ವಿಭಾಗದ ಮುಖ್ಯಸ್ಥೆ ಶ್ರೀಮತಿ ಪ್ರಸನ್ನಾ, ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ವಿನುತಾ ಹಾಗೂ ಕು. ನವಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಸುಭಾಷಿತ ಮಂಜರಿ

ಅರ್ಥಾನಾಮರ್ಜನೇ ದುಃಖಂ
ಅರ್ಜಿತಾನಾಂ ಚ ರಕ್ಷಣೇ ।
ಆಯೇ ದುಃಖಂ ವ್ಯಯೇ ದುಃಖಂ
ಧಿಗರ್ಥಾಃ ಕಷ್ಟಸಂಶ್ರಯಾಃ ॥

–ಪಂಚತಂತ್ರ

ಹಣದ ಸಂಪಾದನೆಯಲ್ಲಿ ದುಃಖ; ಸಂಪಾದಿಸಿದುದರ ರಕ್ಷಣೆಯಲ್ಲಿಯೂ ದುಃಖವೇ, ಆದಾಯದಲ್ಲಿ ದುಃಖ, ವೆಚ್ಚದಲ್ಲಿ ದುಃಖ, ಕಷ್ಟಗಳಿಂದ ಕೂಡಿರುವ ಐಶ್ವರ್ಯಕ್ಕೆ ಧಿಕ್ಕಾರವಿರಲಿ."

ಸಂಪಾದಕೀಯ

ಶಿಕ್ಷಣ ಕ್ಷೇತ್ರದ ದಿಗ್ಗಜರೆಂದೇ ಖ್ಯಾತರಾದ ಡಾ. ಗುರುರಾಜ ಕರ್ಜಗಿ ಅವರ ವಿದ್ಯಾ–ಕೇಂದ್ರದ ಭೇಟಿ ಹಾಗೂ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಪ್ರತ್ಯೇಕ ಗೋಷ್ಠಿಗಳು ಮತ್ತು ಸೆಪ್ಟೆಂಬರ್ 25ರಂದು ಪಂಡಿತ ದೀನ್‌ದಯಾಳ್ ಉಪಾಧ್ಯಾಯ ಅವರ ಜನ್ಮದಿನದಂದು ನಮಾಮಿ ಭಾರತಂ ಹೆಸರಿನಲ್ಲಿ ನಡೆದ ಸಹಸ್ರ ಕಂಠಗಳಲ್ಲಿ ವಂದೇ ಮಾತರಂ ಗಾಯನ ಈ ತಿಂಗಳ ಪ್ರಮುಖ ವಿಷಯಗಳು. ಇದರೊಂದಿಗೆ ಎಲ್ಲಾ ವಿಭಾಗಗಳ ಪೋಷಕರ ಸಭೆ ಯಶಸ್ವಿಯಾಗಿ ನಡೆದಿದೆ. ಜೊತೆಗೆ ಹತ್ತಾರು ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಪ್ರಾಂತ, ಕ್ಷೇತ್ರ, ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿರುವುದು ಹೆಮ್ಮೆಯ ವಿಷಯ. ಹಾಗೂ ವಾರ್ಷಿಕವಾಗಿ ನಡೆಯುವ ಕುಣಿತ ಭಜನೆ, ಜನ್ಮಾಷ್ಟಮಿ ಹಾಗೂ ಇನ್ನಿತರ ವರದಿಗಳೊಂದಿಗಿನ ಸರಯೂ ನಿಮ್ಮೆದುರಿದೆ. ಓದಿ ಪ್ರತಿಕ್ರಿಯೆ ನೀಡಿ.

ಸಂಪಾದಕ ಬಳಗ

ಸಂಪಾದಕೀಯ ಮಂಡಳಿ

ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಕಾರ್ಯನಿರ್ವಾಹಕ ಸಂಪಾದಕರು :
ಕೃಷ್ಣಪ್ರಸಾದ ಕಾಯರ್‌ಕಟ್ಟೆ
ಸಹಸಂಪಾದಕರು :
ರಮ್ಯ(ಶಿಶುಮಂದಿರ)
ಮಾಲತಿ(ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
ವ್ಯವಸ್ಥಾಪಕ ಸಂಪಾದಕರು : ಕುಶಾಲಪ್ಪ ಅಮ್ಮೂರು

ಶಿಶುಮಂದಿರ

ಪಾಲಕರ ಸಭೆ 28.9.2026

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಇಲ್ಲಿ ನಡೆಯಿತು. ಮಾರ್ಗದರ್ಶಕರಾಗಿ ಶ್ರೀಮತಿ ಸುಧಾ ಸೂರ್ಯನಾರಾಯಣ ಭಟ್, ಶ್ರೀಮತಿ ರೂಪಕಲಾ ಮಾತಾಜಿ ಇವರು ಆಗಮಿಸಿದರು. ಸಮಿತಿ ಸದಸ್ಯರಾದ ಶ್ರೀ ಕಮಲಾಕ್ಷ ಇವರು ಉಪಸ್ಥಿತರಿದ್ದರು. ಒಟ್ಟು 16 ಮಂದಿ ಪಾಲಕರು 4 ದಂಪತಿಗಳು ಭಾಗವಹಿಸಿದರು.

ಶ್ರೀಗಣೇಶ ಶಿಶುಮಂದಿರದಲ್ಲಿ ನಡೆದ ಪಾಲಕರ ಸಭೆಯಲ್ಲಿ ಶ್ರೀ ಸತೀಶ್ ಭಟ್ ಶಿವಗಿರಿ ಹಾಗೂ ಶ್ರೀಮತಿ ಶಾಂತಲಕ್ಷ್ಮೀ ಮಾತಾಜಿ ಉಪಸ್ಥಿತರಿದ್ದು, ಮಾರ್ಗದರ್ಶನ ಮಾಡಿದರು. 10 ಪಾಲಕರು ಭಾಗವಹಿಸಿದರು. ಸಮಿತಿ ಸದಸ್ಯರಾದ ಶ್ರೀ ಜನಾರ್ಧನ ಕುಲಾಲ್ ಇವರು ಉಪಸ್ಥಿತರಿದ್ದರು.

ಹೊರಸಂಚಾರ 29.9.2026

ಶ್ರೀಗಣೇಶ ಶಿಶುಮಂದಿರ ಬೊಂಡಾಲದ ಮಕ್ಕಳ ಹೊರಸಂಚಾರವನ್ನು ಶಿಶಿಲ ಮತ್ತು ಸೌತಡ್ಕ ಮಹಾಗಣಪತಿ ದೇವಸ್ಥಾನಕ್ಕೆ ಆಯೋಜಿಸಲಾಗಿತ್ತು. 8 ಮಕ್ಕಳು ಭಾಗವಹಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ 4.9.2026

ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿಯ ಮಕ್ಕಳು ಸ್ನೇಹಾಂಜಲಿ ಸೇವಾ ಸಂಘ ಅಜ್ಜಿಬೆಟ್ಟು ಇದರ 34ನೇ ವರ್ಷದ ಶ್ರೀ ಕೃಷ್ಣಜನ್ಮಾಷ್ಟಮಿಯ ಪ್ರಯುಕ್ತ ನಮ್ಮ ಶಿಶುಮಂದಿರದ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮುದ್ದುಕೃಷ್ಣನನ್ನು ತೊಟ್ಟಿಲಲ್ಲಿ ಮಲಗಿಸುವ ಮೂಲಕ ಕಾರ್ಯಕ್ರಮ ಚಾಲನೆಗೊಂಡಿತು. ಈ ಕಾರ್ಯಕ್ರಮದಲ್ಲಿ 29 ಮಕ್ಕಳು ರಾಧಾಕೃಷ್ಣ ವೇಷಧಾರಿಗಳಾಗಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಚಂದಗೊಳಿಸಿದರು.

ರಂಗ ಮಂಚ ಕಾರ್ಯಕ್ರಮ 26.09.2026

ಶ್ರೀರಾಮ ಶಿಶು ಮಂದಿರದ ಕುಶ ತರಗತಿಯ ಮಕ್ಕಳಿಂದ ರಂಗಮಂಚ ಕಾರ್ಯಕ್ರಮ ಶ್ರೀಲಕ್ಷ್ಮಿಯಲ್ಲಿ ನಡೆಯಿತು. 12 ಶೈಕ್ಷಣಿಕ ವ್ಯವಸ್ಥೆಯಲ್ಲಿ ಒಂದಾದ ರಂಗಮಂಚ ಕಾರ್ಯಕ್ರಮದಲ್ಲಿ ಕುಶ ತರಗತಿಯ 31 ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಪಾಲಕರು ಉಪಸ್ಥಿತರಿದ್ದರು. ಮಕ್ಕಳೇ ಕಾರ್ಯಕ್ರಮವನ್ನು ನಿರೂಪಿಸಿ, ಸ್ವಾಗತಿಸಿ, ವಂದಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ನಮಾಮಿ ಭಾರತಮ್ ವಂದೇ ಮಾತರಮ್ ಸಮೂಹ ಗಾಯನ 25.09.2026

ಈ ಕಾರ್ಯಕ್ರಮದಲ್ಲಿ ರಾಷ್ಟ್ರಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯೆ ಡಾ. ಕಮಲಾ ಪ್ರಭಾಕರ್ ಭಟ್, ಮಾತೃಭಾರತಿ ಸದಸ್ಯರಾದ ಶ್ರೀಮತಿ ಗುರುಪ್ರಿಯ ಕಾಮತ್, ಶ್ರೀಮತಿ ಚೈತ್ರ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದದವರು ಸೇರಿ ಒಟ್ಟು 328 ಮಂದಿ ವಂದೇಮಾತರಂ ಗೀತೆಯನ್ನು ಹಾಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬೊಂಡಾಲದಲ್ಲಿ ನಡೆದ (13.9.2026) ಸಾರ್ವಜನಿಕ ಶ್ರೀ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಗಣೇಶ ಶಿಶುಮಂದಿರದ ಒಟ್ಟು 16 ಮಕ್ಕಳು ಸಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಶ್ರೀ ರಾಮಾಂಜನೇಯ ವ್ಯಾಯಮ ಶಾಲೆ ಶಂಭೂರು ಇದರ ವತಿಯಿಂದ ನಡೆದ (14.9.2026) ಸಾರ್ವಜನಿಕ ಶ್ರೀ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಸರಸ್ವತಿ ಶಿಶುಮಂದಿರದ ಮಕ್ಕಳು ನೃತ್ಯ ಕಾರ್ಯಕ್ರಮವನ್ನು ನೀಡಿದರು.

ಪ್ರಾಥಮಿಕ ಶಾಲೆ

ವಿವೇಕಾನಂದ ವಿದ್ಯಾವರ್ಧಕ ಸಂಘದಿಂದ ಶಾಲಾ ಶೈಕ್ಷಣಿಕ ಪರಿವೀಕ್ಷಣೆ : 1.09.2026

ವಿವೇಕಾನಂದ ವಿದ್ಯಾವರ್ಧಕ ಸಂಘದ ನಿರ್ದೇಶಕರು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ಶ್ರೀರಾಮ ಪದವಿ ಪೂರ್ವ ವಿಭಾಗದ ಮೊದಲ ಪ್ರಾಂಶುಪಾಲರು ಶ್ರೀ ಮಹೇಶ್ವರ ಭಟ್, ಇಂದ್ರಪ್ರಸ್ಥ ವಿದ್ಯಾಸಂಸ್ಥೆ ಉಪ್ಪಿನಂಗಡಿ ಇದರ ಸಂಚಾಲಕರಾಗಿರುವ ಶ್ರೀ ಸುಬ್ರಹ್ಮಣ್ಯ ಭಟ್ ಬಡೆಕ್ಕಿಲ, ರಾಜ್ಯ ಮಟ್ಟದ ಕನ್ನಡ ಭಾಷಾ ವಿಷಯದ ಸಂಪನ್ಮೂಲ ವ್ಯಕ್ತಿ ಶ್ರೀ ನಾರಾಯಣ ಗೌಡ, ತುಂಬೆ ಪ್ರೌಢ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರು ಶ್ರೀ ಶ್ರೀನಿವಾಸ್ ಕೆದಿಲ ವಿವೇಕಾನಂದ ವಿದ್ಯಾವರ್ಧಕ ಸಂಘದ ಶಿಕ್ಷಣ ಸಂಯೋಜಕರಾದ ಶ್ರೀ ರಘುರಾಜ್ ಉಬರಡ್ಕ, ಕೆನರಾ ಹೈಸ್ಕೂಲ್‌ನ ನಿವೃತ್ತ ಅಧ್ಯಾಪಕರು ಶ್ರೀಮತಿ ಲಕ್ಷ್ಮೀ ಏ ಭಟ್, ಪದವಿ ವಿಭಾಗದ ಪ್ರಾಂಶುಪಾಲರು ಹಾಗೂ ವಿದ್ಯಾ–ಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಪ್ರಾಥಮಿಕ ವಿಭಾಗಕ್ಕೆ ಭೇಟಿ ನೀಡಿ ಅಧ್ಯಾಪಕರ ಭೋದನಾ ವಿಧಾನವನ್ನು ಪರಿಶೀಲಿಸಿದರು. ಬಳಿಕ ಅಧ್ಯಾಪಕರೊಂದಿಗೆ ಗುಂಪುಶಃ ಬೈಠಕ್ ಮತ್ತು ಶಾಲಾಭಿವೃದ್ಧಿ ಸಮಿತಿ ಹಾಗೂ ಮಾತೃಭಾರತಿಯ ಪದಾಧಿಕಾರಿಗಳೊಂದಿಗೆ ಬೈಠಕ್ ನಡೆಸಿದರು. ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀ ಚಂದ್ರಶೇಖರ್ ಸಾಲ್ಯಾನ್, ಉಪಾಧ್ಯಕ್ಷರು ಶ್ರೀ ಗುರುಸಿದ್ಧಯ್ಯ ಹಿರೇಮಠ, ಕಾರ್ಯದರ್ಶಿ ಶ್ರೀ ನಾಗಾರಾಜ ಕಲ್ಲಡ್ಕ ಹಾಗೂ ಆಡಳಿತ ಮಂಡಳಿಯ

ಸದಸ್ಯರು ಶ್ರೀಮತಿ ಮಲ್ಲಿಕಾ ಆರ್ ಶೆಟ್ಟಿ, ಮುಖ್ಯೋಪಾಧ್ಯಾಯರು ಹಾಗೂ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಶ್ರೀ ರವಿರಾಜ್ ಕಣಂತೂರು, ಸಹ ಮುಖ್ಯೋಪಾಧ್ಯಾಯರು ಶ್ರೀ ಸುಮಂತ್ ಆಳ್ವ ಉಪಸ್ಥಿತರಿದ್ದರು.

ಸಂಸ್ಕೃತ ಸಪ್ತಾಹ ಕಾರ್ಯಕ್ರಮ : 2.09.2026



ಪ್ರಾಥಮಿಕ ವಿಭಾಗದಲ್ಲಿ ಸಂಸ್ಕೃತ ಸಪ್ತಾಹದ ಅಂಗವಾಗಿ 5ನೇ ಶ್ರವಣ, ಯಾದವ, ಶ್ರೀಕೃಷ್ಣ ತರಗತಿಯ ಮತ್ತು 6ನೇ ನರೇಂದ್ರ , ಅಭಿಮನ್ಯು ತರಗತಿಯ ವಿದ್ಯಾರ್ಥಿಗಳ ನೃತ್ಯ ಪ್ರದರ್ಶನ, **3.09.2026ರಂದು** 5ನೇ ಶ್ರವಣ, ಯಾದವ ತರಗತಿ, 6ನೇ ಅಭಿಮನ್ಯು ತರಗತಿ ಹಾಗೂ 7ನೇ ವಿದ್ಯಾವತಿ, ದಧೀಚಿ ತರಗತಿಯ ವಿದ್ಯಾರ್ಥಿಗಳ ನೃತ್ಯ ಪ್ರದರ್ಶನ ಮತ್ತು 10.09.2026ರಂದು 6ನೇ ಉಪಮನ್ಯು, ಸುಮಿತ್ರೆ ತರಗತಿ ಹಾಗೂ 7ನೇ ಭಾಮತಿ, ಭಗತ್, ಪಾಣಿನಿ ತರಗತಿಯ ವಿದ್ಯಾರ್ಥಿಗಳ ಹಾಡು, ಕಿರು ಪ್ರಹಸನ, ನೃತ್ಯ ಪ್ರದರ್ಶನ ನಡೆಯಿತು.

ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ : 04.09.2026

ಕೃಷ್ಣಜನ್ಮಾಷ್ಟಮಿಯ ಪ್ರಯುಕ್ತ ಪೊಳಲಿ ಶ್ರೀ ರಾಮಕೃಷ್ಣ ತಪೋವನದಲ್ಲಿ 22.08.2026ರಂದು ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರಾದ 6ನೇ ನರೇಂದ್ರ ತರಗತಿಯ ಗೌರಿನಂದಿನಿ ಪ್ರಥಮ, 7ನೇ ಭಗತ್ ತರಗತಿಯ ತನ್ವಿ ಜೆ ಶೆಟ್ಟಿ ತೃತೀಯ ಸ್ಥಾನ ಪಡೆದಿರುತ್ತಾರೆ.

ಶಿಕ್ಷಕರ ದಿನಾಚರಣೆ : 05.09.2026



ಶ್ರೀರಾಮ ವಿದ್ಯಾಕೇಂದ್ರದ ರಾಮಧ್ವನಿ ಸ್ಟುಡಿಯೋವನ್ನು ನಿರ್ವಹಿಸುತ್ತಿರುವ ನವೀಶ್ ಜೆ.ಆಚಾರ್ಯ ಅವರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಶಿಕ್ಷಕರ ದಿನಾಚರಣೆಯ ಮಹತ್ವವನ್ನು ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಶ್ರೀಮಾನ್ "ಸರ್ವಪಲ್ಲಿ ರಾಧಾಕೃಷ್ಣನ್‌ರವರ ಬಗ್ಗೆ ಮಾತನಾಡಿದರು. ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಶ್ರೀಮಾನ್ ಹಾಗೂ ಬುನಾದಿ ಶಿಕ್ಷಣದ ಪ್ರಮುಖರಾದ ಶ್ರೀಮತಿ ರೂಪಕಲಾ ಮಾತಾಜಿ ದಿನದ ಮಹತ್ವವನ್ನು ತಿಳಿಸಿದರು. ನಂತರ ಅಧ್ಯಾಪಕರಾದ ಅನ್ನಪೂರ್ಣ ಮಾತಾಜಿ, ಜ್ಯೋತಿಶ್ರೀ ಮಾತಾಜಿ ರಮ್ಯ ಮಾತಾಜಿ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಂಡರು. ಹಾಗೂ ದೇವಕಿ ಮಾತಾಜಿ ಹಾಡು ಹಾಡಿದರು.

ವಿದ್ಯಾರ್ಥಿಗಳು ದಿನದ ಮಹತ್ವ ಹಾಗೂ ಪ್ರೇರಣಾ ಗೀತೆ ಹಾಡಿದರು. ವಿಶೇಷವಾಗಿ ವಿದ್ಯಾರ್ಥಿಗಳು ಅಧ್ಯಾಪಕರ ಪಾದ ಪೂಜೆ ಮಾಡಿ ಆಶೀರ್ವಾದ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಅಧ್ಯಾಪಕರಿಂದ ನೃತ್ಯ ಪ್ರದರ್ಶನ ನಡೆಯಿತು. ಅಧ್ಯಾಪಕರಿಗೆ ಲಕ್ಕಿಗೇಮ್ ಹಾಗೂ ರಸಪ್ರಶ್ನೆಯನ್ನು ಏರ್ಪಡಿಸಲಾಯಿತು. ವಿಜೇತರಾದ ಅಧ್ಯಾಪಕರಿಗೆ ಬಹುಮಾನ ನೀಡಲಾಯಿತು. ವೇದಿಕೆಯಲ್ಲಿ ಅಧ್ಯಾಪಕ ವೃಂದ, ಅಧ್ಯಾಪಕೇತರರು ಹಾಗೂ ಸ್ವಚ್ಛತಾ ಸಹಾಯಕಿಯರು ಉಪಸ್ಥಿತರಿದ್ದರು.

ಕ್ಷೇತ್ರ ಮಟ್ಟಕ್ಕೆ ಆಯ್ಕೆ : 6.09.2026




ಬಾಲಭಾರತಿ ವಿದ್ಯಾಲಯ ಬಳ್ಳಾರಿ ಇಲ್ಲಿ ನಡೆದ ಪ್ರಾಂತೀಯ ಮಟ್ಟದ ಗಣಿತ ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವದಲ್ಲಿ 'ಸ್ವಚ್ಛ ಭಾರತ ಅಭಿಯಾನ ಮತ್ತು ತ್ಯಾಜ್ಯ ನಿರ್ವಹಣೆ' ಎಂಬ ವಿಜ್ಞಾನ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಶ್ರೀರಾಮ ಪ್ರಾಥಮಿಕ ವಿಭಾಗದ 7ನೇ ತರಗತಿಯ ಸುಧನ್ವ ಕಾಮತ್ ಪ್ರಥಮ ಸ್ಥಾನ ಪಡೆದು ಕ್ಷೇತ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ. ಹಾಗೂ ಸಮಬಹುಭುಜಾಕೃತಿಯ ಗುಣಧರ್ಮಗಳ ಆಧಾರಿತ ಪ್ರದರ್ಶನ ಎಂಬ ಗಣಿತ ಮಾದರಿ ಪ್ರದರ್ಶನದಲ್ಲಿ 6ನೇ ತರಗತಿಯ ನಿಹಾರಿಕಾ ಎಂ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ.

ಹಿರಿಯರೊಂದಿಗೆ ಅಧ್ಯಾಪಕರ ಬೈಠಕ್: 8.9.26

ಪ್ರಾಥಮಿಕ ವಿಭಾಗದಲ್ಲಿ ಅಧ್ಯಾಪಕರ ಬೈಠಕ್ ನಡೆಯಿತು. ಸಂಸ್ಥೆಯ ಹಿರಿಯರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಅಧ್ಯಾಪಕರು ಮಕ್ಕಳ ಚಟುವಟಿಕೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರು, ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರು ಶ್ರೀ ವಸಂತ ಮಾಧವ ಶ್ರೀಮಾನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಶ್ರೀಮಾನ್. ಸಹ ಕಾರ್ಯನಿರ್ವಹಣಾಧಿಕಾರಿ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಶ್ರೀಮಾನ್ ಸಹ ಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಶ್ರೀಮಾನ್ ಉಪಸ್ಥಿತರಿದ್ದರು.

ಬಾಲಪ್ರತಿಭೆಗೆ ಪುರಸ್ಕಾರ: 9.9.2026



"ಅಖಿಲ ಕರ್ನಾಟಕ ಮಾಜಿ ಸೈನಿಕ ಸಂಘ ಬಂಟ್ವಾಳ ಘಟಕದ ಪದಾಧಿಕಾರಿಗಳು ಶಾಲೆಗೆ ಬೇಟಿ ನೀಡಿ ಸಹಾಯ ಹಸ್ತ ಹಾಗೂ ಬಾಲ ಪ್ರತಿಭೆಗೆ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ಅಖಿಲ ಕರ್ನಾಟಕ ಮಾಜಿ ಸೈನಿಕ ಸಂಘ ಬಂಟ್ವಾಳ ಘಟಕದ ಅಧ್ಯಕ್ಷರು ಶ್ರೀ ಮೊನಪ್ಪ ಪೂಜಾರಿ ಮೊಗರ್ನಾಡು ಹಾಗೂ ವಿಟ್ಲ ವಾಣಿಜ್ಯ ವಿಭಾಗದ ಉಪನ್ಯಾಸಕಿ ಶ್ರೀಮತಿ ಜಲಜಾಕ್ಷಿ ಹಿತನುಡಿಗಳನ್ನಾಡಿದರು.

7ನೇ ತರಗತಿಯ ವಿದ್ಯಾರ್ಥಿನಿಯಾದ ಭೂಮಿಕಾ ಇವಳ ಬಾಲ ಪ್ರತಿಭೆಯನ್ನು ಗುರುತಿಸಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಬಂಟ್ವಾಳ ಘಟಕದ ವತಿಯಿಂದ ಇವಳಿಗೆ ಶಾಲು ಹೊದಿಸಿ, ಫಲ–ಪುಷ್ಪಗಳನ್ನಿತ್ತು, ಸ್ಮರಣಿಕೆ ನೀಡಿ ಗೌರವಿಸಿದರು. ಹಾಗೂ ಆರ್ಥಿಕ ಸಮಸ್ಯೆಯ ವಿದ್ಯಾರ್ಥಿಗಳ ಶಾಲಾ ಶುಲ್ಕಕ್ಕೆ ಶ್ರೀಮತಿ ಸುಮತಿ ಮೋನಪ್ಪ ಪೂಜಾರಿ ಮೊಗರ್ನಾಡು ಧನ ಸಹಾಯ ಮಾಡಿದರು. ವಿದ್ಯಾಕೇಂದ್ರದ ಕೋಶಾಧಿಕಾರಿ ಶ್ರೀ ಸತೀಶ್ ಭಟ್ ಶಿವಗಿರಿ ನ್ಯಾಯವಾದಿಗಳು, ಅಖಿಲ ಕರ್ನಾಟಕದ ಮಾಜಿ ಸೈನಿಕರ ಸಂಘ ಬಂಟ್ವಾಳ ಘಟಕದ ಉಪಾಧ್ಯಕ್ಷರು ಶ್ರೀ ಧನಂಜಯ ಗೌಡ ನಾಯ್ತೋಟ್ಟು ಮತ್ತು ದಂಪತಿ, ಪದಾಧಿಕಾರಿಗಳು ಶ್ರೀ ಬಾಲಕೃಷ್ಣ ರೈ ಮತ್ತು ದಂಪತಿ ಮಂಗಿಲದವು, ಶ್ರೀ ಪೂನಾ ಎಚ್ ಮತ್ತು ದಂಪತಿ ನೇರಳಕಟ್ಟೆ, ಶ್ರೀ ದಾಸಪ್ಪ ನೆಕ್ಕಿಲಾರ್, ಸಹಾಯಕ ಕಾರ್ಯನಿರ್ವಹಣಾಧಿಕಾರಿ

ಹಾಗೂ ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಶ್ರೀಮಾನ್, ಸಹ ಮುಖ್ಯೋಪಾಧ್ಯಾಯರು ಶ್ರೀ ಸುಮಂತ್ ಆಳ್ವ ಶ್ರೀಮಾನ್ ಉಪಸ್ಥಿತರಿದ್ದರು.

ಶಾಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ : 12.09.2026

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಗಳಾದ ಕನ್ನಡ, ಇಂಗ್ಲೀಷ್, ಸಂಸ್ಕೃತ ಕಂಠಪಾಠ, ಚಿತ್ರಕಲೆ, ಭಕ್ತಿಗೀತೆ, ಧಾರ್ಮಿಕ ಪಠಣ, ದೇಶಭಕ್ತಿ ಗೀತೆ, ಪ್ರಬಂಧ, ಮಿಮಿಕ್ರಿ, ಕವನ ವಾಚನ , ಕಥೆ ಹೇಳುವುದು, ಕ್ಲೇ ಮಾಡೆಲಿಂಗ್, ಛದ್ಮವೇಷ, ಆಶುಭಾಷಣ ನಡೆಯಿತು.

ಚಟುವಟಿಕೆ ಆಧಾರಿತ ಶಿಕ್ಷಣ – ಹಲ್ಲಿನ ಮಹಿಮೆ ಪಾಠ : 19.09.2026

3ನೇ ತರಗತಿಯ ಮಕ್ಕಳಿಗೆ ಪರಿಸರ ಅಧ್ಯಯನದ ಹಲ್ಲಿನ ಪಾಠಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಪಾಠವನ್ನು ಹಿರಿಯ ವಿಭಾಗದ ವಿಜ್ಞಾನ ಅಧ್ಯಾಪಕರಾದ ಶ್ರೀಮತಿ ಜ್ಯೋತಿಶ್ರೀ ಮಾತಾಜಿ ಇವರು ಹಲ್ಲಿನ ಕಾರ್ಯಗಳ ಬಗ್ಗೆ ವಿವರಿಸಿದರು.

ಶ್ರವಣೋಪಕರಣ ಹಸ್ತಾಂತರ : 18.09.2026




7ನೇ ತರಗತಿಯ ವಿದ್ಯಾರ್ಥಿಯಾದ ಭುವನ್ ಭಾಗಶಃ ವಿಶೇಷ ಚೇತನ ವಿದ್ಯಾರ್ಥಿಯಾಗಿದ್ದು, ಶ್ರವಣ ದೋಷದ ಸಮಸ್ಯೆಯನ್ನು ಎದುರಿಸುತ್ತಿದ್ದನು, ಈ ವಿಚಾರವನ್ನು ಶಾಲೆಯಿಂದ ಆದ್ಯತೆ ಮೇರೆಗೆ ಪರಿಗಣಿಸಿ ವಿಕಾಸಂ ಸೇವಾ ಫೌಂಡೇಶನ್ ಇದರ ಪ್ರಮುಖರಾದ ಗಣೇಶ್ ಭಟ್ ಇವರಲ್ಲಿ ಮಾತುಕತೆ ನಡೆಸಿ ಪರೀಕ್ಷೆಗಾಗಿ ಕಳುಹಿಸಿಕೊಡಲಾಯಿತು. ವಿದ್ಯಾರ್ಥಿಯನ್ನು ಗಮನಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಶ್ರವಣ ಸಾಧನದ ಅಗತ್ಯತೆಯೊಂದಿಗೆ ಆತನ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ, ವಿಶೇಷವಾಗಿ ಶ್ರೀರಾಮ ವಿದ್ಯಾಕೇಂದ್ರದ ವಿದ್ಯಾರ್ಥಿ ಎನ್ನುವ ಕಾರಣಕ್ಕಾಗಿ ದಾನಿಯೋರ್ವರನ್ನು ಸಂಪರ್ಕಿಸಿ ಭುವನ್ ನರಿಕೊಂಬು ಇವರಿಗೆ ಡಿಜಿಟಲ್ ಶ್ರವಣೋಪಕರಣವನ್ನು (ಅಂದಾಜು ಮೌಲ್ಯ 30,000) ಶ್ರೀ ಗೋಪಾಲಕೃಷ್ಣ ಭಟ್ ಮಿತ್ತಕೋಳ್ಯಾರು ಇವರು ಹಸ್ತಾಂತರಿಸಿದರು. ಫಲಾನುಭವಿ ಮಗುವಿನ ತಾಯಿ ಶ್ರೀಮತಿ ಪುಷ್ಪಾ ಸುಧಾಕರ್ ಜೊತೆಗೆ ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಚಿತ್ರಕಲೆ ಸ್ಪರ್ಧೆ–ಪ್ರಥಮ: 26.9.26



"ನೇತ್ರಾವತಿ ಉಳಿಸಿ" ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ 1–3 ವಿಭಾಗದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ' ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಮೂರನೇ ತರಗತಿ ನಿಧಿ ಕೈರಂಗಳ ಪ್ರಥಮ ಸ್ಥಾನ ಪಡೆದಿರುತ್ತಾಳೆ.

ಅತಿಥಿಗಳ ಬೇಟಿ : 23.09.2026



ಕಲಬುರ್ಗಿಯ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳು ಶ್ರೀ ಬಸವರಾಜ ಬೆನ್ನೂರ್ಕರ್, ಕಲಬುರ್ಗಿಯ ಸಕ್ರಿಯ ರಾಜಕಾರಣಿ ಶ್ರೀ ಶಿವರಾಜ್ ಪಾಟೀಲ್ ಹುಳಿಗೆರೆ, ಕಲಬುರ್ಗಿಯ ಶ್ರೀ ಧನ ಶೆಟ್ಟಿ ಹೆಬ್ಬಾಳ ಶಾಲೆಗೆ ಬೇಟಿ ಕೊಟ್ಟು ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸಿದರು. ಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಶ್ರೀಮಾನ್ ಉಪಸ್ಥಿತರಿದ್ದರು.

ನಮಾಮಿ ಭಾರತಮ್ ವಂದೇ ಮಾತರಂ ಸಮೂಹ ಗಾಯನ ಕಾರ್ಯಕ್ರಮ: 25.09.26

ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನದವರು ದೇಶದಾದ್ಯಂತ ಆಯೋಜಿಸಿದ ವಂದೇ ಮಾತರಂ 150ನೇ ವರ್ಷದ ನಿಮಿತ್ತ ನಮಾಮಿ ಭಾರತಮ್ ವಂದೇ ಮಾತರಂ ಸಮೂಹ ಗಾಯನ – ಬುನಾದಿ ಶಿಕ್ಷಣ ಹಾಗೂ ಪ್ರಾಥಮಿಕ ವಿಭಾಗಗಳಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯೆ ಡಾ. ಕಮಲಾ ಪ್ರಭಾಕರ್ ಭಟ್, ಶ್ರೀರಾಮ ಪ್ರಾಥಮಿಕ ಶಾಲೆಯ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀ ಚಂದ್ರಶೇಖರ್ ಸಾಲ್ಯಾನ್, ಕಾರ್ಯದರ್ಶಿ ಶ್ರೀ ನಾಗರಾಜ್ ಕೆ.ಎಸ್, ಮಾತೃಭಾರತಿ ಸದಸ್ಯರಾದ ಶ್ರೀಮತಿ ಗುರುಪ್ರಿಯಾ ಕಾಮತ್, ಶ್ರೀಮತಿ ಚೈತ್ರ, ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು, ಸಹ ಮುಖ್ಯೋಪಾಧ್ಯಾಯರು ಶ್ರೀ ಸುಮಂತ್ ಆಳ್ವ ಉಪಸ್ಥಿತರಿದ್ದರು. ಒಟ್ಟು 1209 ಮಂದಿ ಅಖಂಡ ವಂದೇಮಾತರಂ ಗೀತೆಯನ್ನು ಹಾಡಿದರು.

ಅತಿಥಿಗಳ ಭೇಟಿ : 23.09.2026

ಶ್ರೀರಾಮ ಪ್ರಾಥಮಿಕ ವಿಭಾಗಕ್ಕೆ ಬೆಂಗಳೂರು ಉಚ್ಚನ್ಯಾಯಾಲಯದ ಖ್ಯಾತ ನ್ಯಾಯವಾದಿಗಳು ಶ್ರೀ ಗುಪ್ತ ಲಿಂಗ ಪಾಟೀಲ್ ಕಲ್ಬುರ್ಗಿ ಶಾಲೆಗೆ ಭೇಟಿ ಕೊಟ್ಟು ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸಿದರು.

ಬೂಸ್ಟ್ ಕಂಪೆನಿಯವರು ಬೇಟಿ :

ಬೂಸ್ಟ್ ಕಂಪೆನಿಯವರು ಬೇಟಿ ಇತ್ತರು. ವಿದ್ಯಾರ್ಥಿಗಳ ಎರಡು ತಂಡಗಳನ್ನು ಮಾಡಿ ಮಕ್ಕಳಿಗೆ ಚಟುವಟಿಕೆ ನೀಡಿದರು. ಅದರಲ್ಲಿ ಸರಿಯಾಗಿ ಉತ್ತರಿಸಿದ ಮಕ್ಕಳಿಗೆ ಬಹುಮಾನವನ್ನು ನೀಡಿದರು.

ಪ್ರೌಢ ಶಾಲೆ

ವೈಟ್‌ಲಿಫ್ಟಿಂಗ್ ರಾಜ್ಯಮಟ್ಟಕ್ಕೆ ಆಯ್ಕೆ 1.9.26



ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಸೈಂಟ್ ರೀಟಾ ಆಂಗ್ಲ ಮಾಧ್ಯಮ ಶಾಲೆ. ವಿಟ್ಲ ಇಲ್ಲಿ ನಡೆದ ಜಿಲ್ಲಾ ಮಟ್ಟದ ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ –79 ಕೆ.ಜಿ ವಿಭಾಗದಲ್ಲಿ 9ನೇ ತರಗತಿಯ ಜೀವಿತ್ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

ಸಂಸ್ಕೃತಿ ಜ್ಞಾನ ರಸಪ್ರಶ್ನೆ ದ್ವಿತೀಯ ಸ್ಥಾನ



ದಿನಾಂಕ 4.9.2026 ರಿಂದ 6.9.2026 ರವರೆಗೆ ಬಾಲ ಭಾರತಿ ವಿದ್ಯಾಲಯ ಬಳ್ಳಾರಿ ಇಲ್ಲಿ, ಪ್ರಾಂತೀಯ ಗಣಿತ – ವಿಜ್ಞಾನ ಮತ್ತು ಸಂಸ್ಕೃತಿ ಮಹೋತ್ಸವದ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಪ್ರಜ್ಞಾ, ಶಿವಾನಿ, ಮತ್ತು ಧಾತ್ರಿ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ

ಯೋಗಾಸನ ಸ್ಪರ್ಧೆ ಜಿಲ್ಲಾಮಟ್ಟಕ್ಕೆ ಆಯ್ಕೆ 3.9.26

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ದ.ಕ.ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆ ನರಿಕೊಂಬು ಇಲ್ಲಿ ನಡೆದ ತಾಲೂಕು ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 10ನೇ ತರಗತಿಯ ಶುಭ ನಾರಾಯಣ ಭಟ್ ಸಾಂಪ್ರದಾಯಿಕ ಯೋಗಾಸನದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ

"ಗ್ರೀನ್ ಸ್ಕೂಲ್ ಡ್ರೈವ್ ಡೇ" ಕಾರ್ಯಕ್ರಮ 2.9.26

ಮಧುಕರ ಸಭಾಂಗಣದಲ್ಲಿ ಸ್ವಚ್ಛತಾ ಪಕವಾಡದ "ಗ್ರೀನ್ ಸ್ಕೂಲ್ ಡ್ರೈವ್ ಡೇ" ಕಾರ್ಯಕ್ರಮ ಪ್ರಯುಕ್ತ ನೀರಿನ ಸಂರಕ್ಷಣೆ ಹಾಗೂ ಮಿತವಾದ ಬಳಕೆ ಮತ್ತು ಪ್ಲಾಸ್ಟಿಕ್ ಬಳಕೆಯನ್ನು ಮಾಡದೇ ಇರುವ ಬಗ್ಗೆ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀ ಗೋಪಾಲ ಶ್ರೀಮಾನ್ ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಪರಿಸರ ಸ್ವಚ್ಛತೆಗೆ ಸಂಬಂಧಿಸಿದ ಸ್ವಚ್ಛತಾ ಘೋಷಣೆಗಳು ಮತ್ತು ಪ್ರತಿಜ್ಞೆಯನ್ನು ಮಾಡಿದರು.

ರೋಲರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾಗಿ 1.9.26

ಶ್ರೀ ವಿದ್ಯಾರಣ್ಯ ಇಂಟರ್ ನ್ಯಾಷನಲ್ ಸ್ಕೂಲ್ ಹೈದರಬಾದ್ ಇಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ರೋಲರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಶ್ರವಣ್ 1000 ಮೀಟರ್ ಇನ್ಲೈನ್ ರೋಡ್ ದ್ವಿತೀಯ ಸ್ಥಾನ 3000 ಮೀಟರ್ ರೋಡ್ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟದಲ್ಲಿ ಭಾಗವಹಿಸಿರುತ್ತಾನೆ.

500 mtr ರಿಂಕ್ ತೃತೀಯ ಸ್ಥಾನ ಚಿನ್ಮಯ್500 ಮೀಟರ್ ರಿಂಕ್ ತೃತೀಯ ಸ್ಥಾನ ಹೇಮನ್ 500 mtr ರಿಂಕ್‌ನಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

ಕಬಡ್ಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆ 09.09.2026

ಸಾರ್ವಜನಿಕ ಶಿಕ್ಷಣ ಇಲಾಖೆ ಪಿ. ಎಂ. ಶ್ರೀ. ಸರಕಾರಿ ಪ್ರೌಢಶಾಲೆ ವಿಟ್ಲ ಇಲ್ಲಿ ನಡೆದ ತಾಲೂಕು ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ 14ರ ವಯೋಮಾನದ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಶ್ರೀಹಾನ್ ಉತ್ತಮ ರೈಡರ್ ಪ್ರಶಸ್ತಿಯನ್ನು, ಧನುಷ್ ಉತ್ತಮ ಹಿಡಿತಗಾರ ಪ್ರಶಸ್ತಿಯನ್ನು ಪಡೆದಿರುತ್ತಾನೆ.

ಶಾಲಾ ಅಭಿವೃದ್ಧಿ ಮತ್ತು ಮಾತೃಭಾರತೀಯ ಸಮಿತಿಗಳ ಕಾರ್ಯಗಾರ 12.09.2026



ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು ಮತ್ತು ಮಾತೃ ಭಾರತೀಯ ಸದಸ್ಯರಿಗೆ ಒಂದು ದಿನದ ಕಾರ್ಯಗಾರವನ್ನು ನಡೆಸಲಾಯಿತು. ಕಾರ್ಯಾಗಾರದಲ್ಲಿ ಶ್ರೀರಾಮ ವಿದ್ಯಾ–ಕೇಂದ್ರದ ಸಂಸ್ಥಾಪಕರಾಗಿರುವ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಹಾಗೂ ಸಂಚಾಲಕರಾಗಿರುವ ವಸಂತ ಮಾದವ ಶ್ರೀಮಾನ್ ಉಪಸ್ಥಿತರಿದ್ದರು, ಶಾಲಾ ಅಭಿವೃದ್ಧಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರಿಗೆ ಕಾರ್ಯಗಾರದ ಮೊದಲ ಅವಧಿಯನ್ನು ರವಿರಾಜ್ ಶ್ರೀಮಾನ್ ಶಾಲಾ ಅಂಕಿ ಅಂಶಗಳ ವಿವರಣೆಯನ್ನು ತಿಳಿಸಿದರು. ನಂತರ ಅದರ ಬಗ್ಗೆ ಶ್ರೀರಾಮ ವಿದ್ಯಾ–ಕೇಂದ್ರದ ಕೋಶಾಧಿಕಾರಿಯಾಗಿರುವ ಸತೀಶ್ ಶಿವಗಿರಿಯೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಮಾತೃಭಾರತಿ ಸಮಿತಿಯ ಕಾರ್ಯಗಾರದಲ್ಲಿ ಮೊದಲ ಅವಧಿಯನ್ನು ವಿದ್ಯಾ ಕೇಂದ್ರದ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ನಿರ್ವಹಿಸಿದರು ನಂತರ ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಅವರ ಉಪಸ್ಥಿತಿಯಲ್ಲಿ ಸಂವಾದ ಕಾರ್ಯ ನಡೆಯಿತು. ಕಾರ್ಯಗಾರದ ಕೊನೆಯಲ್ಲಿ ಡಾ। ಪ್ರಭಾಕರ ಭಟ್ ಕಲ್ಲಡ್ಕ ಶ್ರೀಮಾನ್ ಸಂವಾದ ಕಾರ್ಯಕ್ರಮ ನಡೆಸಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಕಾರ್ಯಗಾರದಲ್ಲಿ ವಿದ್ಯಾ–ಕೇಂದ್ರದ ಎಲ್ಲಾ ವಿಭಾಗದ ಮಾತೃ ಭಾರತೀಯ ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟ

ದಿನಾಂಕ 17.09.2026 ಮತ್ತು 18.09.2026 ರಂದು ಜೆಮ್ ಪಬ್ಲಿಕ್ ಸ್ಕೂಲ್ ಗೋಳ್ತಮಜಲು ಇದರ ಆಶ್ರಯದಲ್ಲಿ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ ಮಾಣಿ ಇಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳು –

17ರ ವಯೋಮಾನದ ಬಾಲಕರು :

ಸಂಕೀರ್ತ್ ಶೆಟ್ಟಿ 10ನೇ ಚಕ್ರ ಎಸೆತ ಪ್ರಥಮ, ಹ್ಯಾಮರ್ ಥ್ರೋ ಪ್ರಥಮ, ಗುಂಡು ಎಸೆತ ದ್ವಿತೀಯ, ಶ್ರೇಯಾಂಕ್ 10ನೇ ಉದ್ದ ಜಿಗಿತ ಪ್ರಥಮ, 200ಮೀ. ಓಟ ದ್ವಿತೀಯ ಸ್ಥಾನ, 100 ಮೀ. ಓಟ ದ್ವಿತೀಯ ಸ್ಥಾನ 4*100 ರಿಲೇ ಪ್ರಥಮ, ಗುರುನಂದನ್ ರೈ 10ನೇ 5 ಕಿ.ಮೀ. ನಡಿಗೆ ಪ್ರಥಮ ಸ್ಥಾನ. ಪ್ರಥಮ್ 10ನೇ 4*100 ರಿಲೇ ಪ್ರಥಮ ಸ್ಥಾನ ಮುರಳೀಧರ 10ನೇ 4*100 ರಿಲೇ ಪ್ರಥಮ ಸ್ಥಾನ, ಧೀರಜ್ 9ನೇ 4*100 ರಿಲೇ ಪ್ರಥಮ ಸ್ಥಾನ

17 ರ ವಯೋಮಾನದ ಬಾಲಕಿಯರು :

ಸಾನ್ವಿ 10ನೇ 400 ಮೀ. ಹರ್ಡಲ್ಸ್ ಪ್ರಥಮ ಸ್ಥಾನ, ತ್ರಿವಿಧ ಜಿಗಿತ ದ್ವಿತೀಯ ಸ್ಥಾನ, 4*100 ರಿಲೇ ತೃತೀಯ ಸ್ಥಾನ 4*400 ರಿಲೇ ತೃತೀಯ ಸ್ಥಾನ, ಜಾನ್ವಿ 9ನೇ ಗುಂಡು ಎಸೆತ ದ್ವಿತೀಯ ಸ್ಥಾನ, ಚಕ್ರ ಎಸೆತ ದ್ವಿತೀಯ ಸ್ಥಾನ, ಹ್ಯಾಮರ್ ಥ್ರೋ ದ್ವಿತೀಯ ಸ್ಥಾನ, ಸ್ಪಂದನ 9ನೇ 3ಕಿ.ಮೀ. ನಡಿಗೆ ದ್ವಿತೀಯ ಸ್ಥಾನ, 4*100 ರಿಲೇ ತೃತೀಯ ಸ್ಥಾನ, 4*400 ರಿಲೇ ತೃತೀಯ ಸ್ಥಾನ, ಲಕ್ಷ್ಯ 9ನೇ 400 ಮೀ.. ಹರ್ಡಲ್ಸ್ ದ್ವಿತೀಯ ಸ್ಥಾನ, 100 ಮೀ. ಹರ್ಡಲ್ಸ್ ದ್ವಿತೀಯ ಸ್ಥಾನ

4*400 ರಿಲೇ ತೃತೀಯ ಸ್ಥಾನ, ಶ್ರೀನಿಧಿ 9ನೇ 100ಮೀ. ಹರ್ಡಲ್ಸ್ ತೃತೀಯ ಸ್ಥಾನ, 4*100 ರಿಲೇ ತೃತೀಯ ಸ್ಥಾನ, ಶುಭ ನಾರಾಯಣ ಭಟ್ 10ನೇ ಜಾವಲಿನ್ ಥ್ರೋ ತೃತೀಯ ಸ್ಥಾನ, ಶ್ರೇಯ 10ನೇ 4*100 ರಿಲೇ ತೃತೀಯ ಸ್ಥಾನ.

14 ರ ವಯೋಮಾನದ ಬಾಲಕರು :–

ಸ್ಪಸ್ಟಿಕ್ 8ನೇ ಉದ್ದ ಜಿಗಿತ ಪ್ರಥಮ ಸ್ಥಾನ, ಎತ್ತರ ಜಿಗಿತ ಪ್ರಥಮ ಸ್ಥಾನ, 200 ಮೀ ಓಟ ದ್ವಿತೀಯ ಸ್ಥಾನ, 4*100 ರಿಲೇ ದ್ವಿತೀಯ ಸ್ಥಾನ, ವೈಯಕ್ತಿಕ ಚಾಂಪಿಯನ್ ಶಿಪ್ ಪಡೆದುಕೊಂಡಿರುತ್ತಾನೆ. ಮನ್ವಿತ್ 8ನೇ 600 ಮೀ. ಓಟ ದ್ವಿತೀಯ ಸ್ಥಾನ, ಹೇಮನ್ 8ನೇ 80ಮೀ. ಹರ್ಡಲ್ಸ್ ತೃತೀಯ ಸ್ಥಾನ, 4*100ರಿಲೇ ದ್ವಿತೀಯ ಸ್ಥಾನ, ಧನುಷ್ 8ನೇ 4*100ರಿಲೇ ದ್ವಿತೀಯ ಸ್ಥಾನ, ಶ್ರೀಹಾನ್ 8ನೇ 4*100ರಿಲೇ ದ್ವಿತೀಯ ಸ್ಥಾನ.

14 ರ ವಯೋಮಾನದ ಬಾಲಕಿಯರು :

ಹರ್ಷಿಕ 8ನೇ ಉದ್ದ ಜಿಗಿತ ತೃತೀಯ ಸ್ಥಾನ, ಸಾನ್ವಿ ಕೆ ಬಿ 8ನೇ ಚಕ್ರ ಎಸೆತ ದ್ವಿತೀಯ ಸ್ಥಾನ, ಶಿವಾನಿ 8ನೇ 600 ಮೀ. ಓಟ ತೃತೀಯ ಸ್ಥಾನ

NCC ತಂಡದಿಂದ ಸ್ವಚ್ಛತಾ ಕಾರ್ಯ 19.9.2026

ಪ್ರೌಢಶಾಲೆ ಕಲ್ಲಡ್ಕದ ಎನ್.ಸಿ.ಸಿ ಘಟಕ ಮತ್ತು ವಿದ್ಯಾಭಾರತಿ ಕರ್ನಾಟಕ ವತಿಯಿಂದ ಮಂಗಳೂರಿನ ಸೋಮೇಶ್ವರ ಬೀಚ್ನಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು. ಸಮುದ್ರ ತೀರದಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಚೀಲಗಳು, ಬಾಟಲಿಗಳು, ಬಟ್ಟೆ ಇತ್ಯಾದಿ ಕಸಗಳನ್ನು ಹೆಕ್ಕಿ ಪ್ರತ್ಯೇಕ ಚೀಲಗಳಿಗೆ ತುಂಬಿಸಲಾಯಿತು. ನಂತರ ಸ್ಥಳೀಯರಾದ ಶ್ರೀ ದಯಾನಂದ ಸೊವೂರು ಇವರು ಪುರಸಭೆಯ ವಾಹನವನ್ನು ಸಂಪರ್ಕಿಸಿ ಕಸ ತುಂಬಿದ ಚೀಲಗಳನ್ನು ವಾಹನದಲ್ಲಿ ತುಂಬಿಸಿ ಕಳುಹಿಸಲಾಯಿತು. ಮತ್ತು ಇವರು ವಿದ್ಯಾರ್ಥಿಗಳಿಗೆ ಮಜ್ಜಿಗೆ ವ್ಯವಸ್ಥೆ ಮಾಡಿದರು. ಸಮುದ್ರ ತೀರಕ್ಕೆ ಹೋದಾಗ ತಮ್ಮ ರಕ್ಷಣೆ, ಮೀನುಗಾರಿಕೆಯಲ್ಲಿ ಬಳಸುವ ಮೀನಿನ ಬಲೆ ಇವುಗಳ ಬಗ್ಗೆ ಸಮುದ್ರದ ತಟ ರಕ್ಷಕರಾದ ಶ್ರೀ ಅಶೋಕ ಮತ್ತು ಶ್ರೀ ಪ್ರಕಾಶ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು. ಎನ್.ಸಿ.ಸಿ ಘಟಕದ 93 ವಿದ್ಯಾರ್ಥಿಗಳು ಭಾಗವಹಿಸಿದರು. ಎಲ್ಲರಿಗೆ ಸೋಮೇಶ್ವರ ದೇವಸ್ಥಾನ ವತಿಯಿಂದ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಎನ್.ಸಿ.ಸಿ ಪ್ರಮುಖರಾದ ಪುರುಷೋತ್ತಮ, ಸ್ಥಳೀಯರಾದ ನಾರಾಯಣ ಕುಂಪಲ,

ನಾರಾಯಣ ಕಜೆ, ಶ್ರೀನಿವಾಸ, ವಿದ್ಯಾಭಾರತಿಯ ಪ್ರಾಂತ ಸೇವಾಪ್ರಮುಖ ಮರುಳಾರಾಧ್ಯ ಸ್ವಾಮಿ, ಸಹ ಸೇವಾ ಪ್ರಮುಖ ಸುರೇಶ ಜಿ, ಅಧ್ಯಾಪಕರಾದ ಜಿನ್ನಪ್ಪ, ಕುಶಾಲಪ್ಪ, ರಮ್ಯ ಮತ್ತು ಪ್ರತೀಕ್ಷಾ ಉಪಸ್ಥಿತರಿದ್ದರು

BOOST ಕಂಪನಿ–ಚಟುವಟಿಕೆ 19.09.26

BOOST ಕಂಪನಿಯ ಶ್ರೀ ಅಭಿಷೇಕ್ ಮತ್ತು ಭರತ್ ಅವರ ನೇತೃತ್ವದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿವಿಧ ಚಟುವಟಿಕೆಯನ್ನು ನಡೆಸಿ ಬಹುಮಾನ ವಿತರಿಸಿದರು.

ಸೈನ್ಸ್ ಫೆಸ್ಟ್‌ನಲ್ಲಿ ಭಾಗಿ 19.09.2026



ಯುನಿವರ್ಸಲ್ ಗ್ರೀನ್ ಸ್ಕೂಲ್ ಬೆಂಗಳೂರಿನಲ್ಲಿ ನಡೆದ ಅವಿಷ್ಕಾರ 2026 ಸೈನ್ಸ್ ಫೆಸ್ಟ್ ನಲ್ಲಿ ಬೇರೆ ಬೇರೆ ರಾಜ್ಯದ 108 ತಂಡಗಳು ಭಾಗವಹಿಸಿದ್ದು ಅದರಲ್ಲಿ ಟಾಪ್ 10ರಲ್ಲಿ ಜಗನ್, ಆದಿತ್ಯ, ಯಶ್ವಿತ್ ಆಯ್ಕೆಯಾಗಿರುತ್ತಾರೆ.

ವಿದ್ಯಾರ್ಥಿ ಕವಿ ಗೋಷ್ಠಿಯಲ್ಲಿ ಭಾಗಿ 22.09.2026

ಶ್ರೀರಾಮ ಪದವಿಪೂರ್ವ ವಿಭಾಗದಲ್ಲಿ ನಡೆದ ವಿದ್ಯಾರ್ಥಿ ಕವಿಗೋಷ್ಠಿಯಲ್ಲಿ ಶ್ರೀರಾಮ ಪ್ರೌಢಶಾಲೆಯ ಚಿನ್ಮಯಿ, ವೈಷ್ಣವಿ ಭಾಗವಹಿಸಿರುತ್ತಾರೆ.

ವಂದೇ ಮಾತರಂ ಸಮೂಹ ಗಾಯನ 25.9.26

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮ ದಿನದ ಪ್ರಯುಕ್ತ ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನದವರು ದೇಶದಾದ್ಯಂತ ಆಯೋಜಿಸಿದ ನಮಾಮಿ ಭಾರತಮ್ ವಂದೇ ಮಾತರಮ್ ಸಮೂಹ ಗಾಯನ ಕಾರ್ಯಕ್ರಮವು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನಡೆಯಿತು. ಮಾತೃಭಾರತೀಯ ಅಧ್ಯಕ್ಷರಾದ ಶ್ರೀಮತಿ ಸ್ವಾತಿ, ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಯರಾಮ್ ನೆಟ್ಲ, ಶಾಲಾ ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಯಾದ ಪುಷ್ಪರಾಜ್ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ವಂದೇ ಮಾತರಂ ಗೀತೆಯ ಮಹತ್ವವನ್ನು ತಿಳಿಸಿದರು. ಉಪನ್ಯಾಸಕ ವೃಂದದವರು ಸೇರಿ ಒಟ್ಟು 850 ಮಂದಿ ವಂದೇಮಾತರಂ ಗೀತೆಯನ್ನು ಹಾಡಿದರು.

ಕ್ರೀಡೋತ್ಸವದ ಪೂರ್ವಭಾವಿ ಬೈಠಕ್ 25.09.26

ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಕ್ರೀಡೋತ್ಸವದ ಪೂರ್ವಭಾವಿ ಬೈಠಕ್ ನಡೆಯಿತು. ಎಲ್ಲಾ ವಿಷಯಗಳ ಪ್ರಮುಖರು ತಮ್ಮ ವಿಷಯಗಳ ಬಗ್ಗೆ ವಿವರಣೆ ನೀಡಿದರು.

ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾಗಿ

25.09.2026 ರಿಂದ 27.09.2026ರ ತನಕ ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಪ್ರೌಢಶಾಲೆಯ 10ನೇ ತರಗತಿಯ ಶ್ರವಣ್ ಭಾಗವಹಿಸಿರುತ್ತಾನೆ.

ಇಂಗ್ಲಿಷ್ ಮೀಡಿಯಂ ಸ್ಕೂಲ್

ಅತಿಥಿಗಳ ಭೇಟಿ 01.09.2026

ಸರಸ್ವತಿ ವಂದನಾದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಶೈಕ್ಷಣಿಕ ಸಂಯೋಜಕರಾದ ಶ್ರೀ ರಘುರಾಜ್ ಉಬರಡ್ಕರವರು ಉಪಸ್ಥಿತರಿದ್ದು, ಜ್ಞಾನ ವಿಜ್ಞಾನ ಮೇಳದಲ್ಲಿ ಭಾಗವಹಿಸಿ, ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಶಾಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ 17.9.26

ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್ ನಲ್ಲಿ ಪ್ರತಿಭಾ ಕಾರಂಜಿಯ ಶಾಲಾ ಮಟ್ಟದ ವೈಯಕ್ತಿಕ ಮತ್ತು ಗುಂಪು ಸ್ಪರ್ಧೆಗಳನ್ನು ನಡೆಸಲಾಯಿತು.

ಕ್ರೀಡಾ ಸಾಧನೆ 17.9.26 ಮತ್ತು 18.09.2026


ಬಾಲ ವಿಕಾಸ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ 8ನೇ ತರಗತಿಯ ಪೃಥ್ವಿನ್, 14 ವರ್ಷದೊಳಗಿನ ಬಾಲಕರ 100 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾದರು. 200 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದರು. 8ನೇ ತರಗತಿಯ ಸಾನ್ವಿಕಾ ಆರ್. ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾದರು. 9ನೇ ತರಗತಿಯ ಜೈಶ್ನವಿ ಅವರು17 ವರ್ಷದೊಳಗಿನವರ ಜಾವೆಲಿನ್ ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾದರು. 10ನೇ ತರಗತಿಯ ಲಿಖಿತ್ ಅವರು 17 ವರ್ಷದೊಳಗಿನವರ ಡಿಸ್ಕಸ್ ಎಸೆತದಲ್ಲಿ ತೃತೀಯ ಸ್ಥಾನ ಪಡೆದರು. 8ನೇ ತರಗತಿಯ ಶ್ರೇಯಸ್ ಅವರು ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನ ಗಳಿಸಿದರು. ಬಾಲಕರ ವಿಭಾಗ ಚಿಂತನ್ ಬಿ. ಜೆ. 8ನೇ ತರಗತಿ 3000 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಗಳಿಸಿದರು.

ಕ್ಷೇತ್ರ ಮಟ್ಟಕ್ಕೆ ಆಯ್ಕೆ 5.9.26



ಬಾಲ ಭಾರತಿ ಕೇಂದ್ರೀಯ ವಿದ್ಯಾಲಯ ಬಳ್ಳಾರಿಯಲ್ಲಿ ನಡೆದ ಪ್ರಾಂತೀಯ ಮಟ್ಟದ ಗಣಿತ ವಿಜ್ಞಾನ ಮತ್ತು ಸಂಸ್ಕೃತಿ ಮಹೋತ್ಸವದಲ್ಲಿ ಕಿಶೋರ ವರ್ಗದ ಜಾನಪದ ನೃತ್ಯ – ಪ್ರಥಮ ಸ್ಥಾನ ಮತ್ತು ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ (ನವೀನ ಮಾದರಿ) ಹತ್ತನೇ ತರಗತಿಯ ಸಾನಿಕ್ ಪ್ರಥಮ ಸ್ಥಾನ ಪಡೆದು, ಕ್ಷೇತ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಶಿಕ್ಷಕರ ದಿನಾಚರಣೆ 5.9.2026



ಶ್ರೀರಾಮ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ವಿದ್ಯಾರ್ಥಿಗಳಿಗೆ ಶಿಕ್ಷಕ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿ ತನ್ನ ಹಾಡಿನ ಮೂಲಕ ಶಿಕ್ಷಕರಿಗೆ ಗೌರವನ್ನು ಸೂಚಿಸಿದರು. ವಿದ್ಯಾರ್ಥಿ ಸೃಜನ ನಿರೂಪಿಸಿದಳು. ಕಾರ್ಯಕ್ರಮ ಶಾಂತಿಮಂತ್ರದೊಂದಿಗೆ ಕೊನೆಗೊಂಡಿತು.

ವಂದೇ ಮಾತರಂ ಸಾಮೂಹಿಕ ಗೀತ ಗಾಯನ ಕಾರ್ಯಕ್ರಮ: 25.09.2026

"ನಮಾಮಿ ಭಾರತ" – ವಂದೇ ಮಾತರಂ ಸಾಮೂಹಿಕ ಗಾಯನ ಕಾರ್ಯಕ್ರಮದಲ್ಲಿ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸುಜಿತ್ ಕೊಟ್ಟಾರಿಯವರು ವಂದೇ ಮಾತರಂ ಮಹತ್ವವನ್ನು ತಿಳಿಸಿದರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಧೀರಜ್, ಮತ್ತು ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು. 766 ವಿದ್ಯಾರ್ಥಿಗಳು ಸಾಮೂಹಿಕವಾಗಿ ವಂದೇ ಮಾತರಂ ಗೀತೆಯನ್ನು ಹಾಡಿದರು.

ಕವಿ ಗೋಷ್ಠಿ ಕಾರ್ಯಕ್ರಮದಲ್ಲಿ ಭಾಗಿ 22.9.2026
ಅಖಿಲ ಭಾರತ ಸಾಹಿತ್ಯ ಪರಿಷತ್ತು ದಕ್ಷಿಣ ಕನ್ನಡ ಮತ್ತು ಬಂಟ್ವಾಳ ತಾಲೂಕು ಸಾಹಿತ್ಯ ಸಮಿತಿ ವತಿಯಿಂದ ನಡೆದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ 8ನೇ ತರಗತಿಯ ಕಾರುಣ್ಯ, 9ನೇ ತರಗತಿ ಅಭಿಜ್ಞಾ, 10ನೇ ತರಗತಿಯ ಷಷ್ಮಿ ಭಾಗವಹಿಸಿದ್ದರು.

ಚಿತ್ರಕಲಾ ಸ್ಪರ್ಧೆ: ದ್ವಿತೀಯ ಸ್ಥಾನ 29.09.26
ಟಿ.ಎಂ ಪೈ ಕನ್ವೆನ್ಷನಲ್ ಹಾಲ್ ಮಂಗಳೂರಿನಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಪ್ರೌಢ ವಿಭಾಗದ ಚಿತ್ರಕಲಾ ಸ್ಪರ್ಧೆಯಲ್ಲಿ ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ 9ನೇ ತರಗತಿಯ ನಿನಾದ್ ಕೈರಂಗಳ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

ಪದವಿ ಪೂರ್ವ

ಭಜನೆ– ಸಾಮೂಹಿಕ ಹುಟ್ಟುಹಬ್ಬ 31.8.26
ದ್ವಿತೀಯ ವಿಜ್ಞಾನ ರಾಜಗುರು ತರಗತಿಯ ವಿದ್ಯಾರ್ಥಿಗಳು ಮಾಸಿಕ ಭಜನೆ ನಡೆಸಿದರು ಹಾಗೂ ಜುಲೈ – ಆಗಸ್ಟ್ ತಿಂಗಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು.

ಕೃಷ್ಣಾರ್ಪಣಂ – ಚಿತ್ರಕಲೆ ಸ್ಪರ್ಧೆ 3.9.2026
ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ಕೃಷ್ಣಾರ್ಪಣಂ ಹಾಗು ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಯಿತು.

ಕಾರ್ಯಾಗಾರ 06.09.2026
ಮೂಡುಬಿದಿರೆಯ ವೈಬ್ರೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಜೀವಶಾಸ್ತ್ರ ಉಪನ್ಯಾಸಕರ ಕಾರ್ಯಾಗಾರದಲ್ಲಿ ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಶೈಲಿನಿ ಹಾಗೂ ಕುಮಾರಿ ರೇಷ್ಮಾ ಅವರು ಭಾಗವಹಿಸಿದರು.

ವಿಜ್ಞಾನ ಗಣಿತ ಮತ್ತು ಸಂಸ್ಕೃತಿ ಮಹೋತ್ಸವ 6.9.26
ಬಳ್ಳಾರಿಯಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಗಣಿತ ಮತ್ತು ಸಂಸ್ಕೃತಿ ಮಹೋತ್ಸವ ಸ್ಪರ್ಧೆಯಲ್ಲಿ ತೇಜ, ಮನಾಲಿ, ಪ್ರಣಾಮ, ಪ್ರೀತೇಶ್, ಬ್ರಾಹ್ಮಿ, ಗೀತೇಶ, ಆಶ್ರಯ, ಯಕ್ಷಿತ್ ಪ್ರಥಮ ಸ್ಥಾನ ಪಡೆದಿದ್ದಾರೆ. ಸೃಜನ್ ಕೃಷ್ಣ, ಆರುಷ್, ಶಶಿಕಿರಣ್, ಶ್ರೀವತ್ಸ ಮತ್ತು ವಸುಧಾ ದ್ವಿತೀಯ ಸ್ಥಾನ ಪಡೆದು–ಕೊಂಡಿದ್ದಾರೆ

ಕಾರ್ಯಾಗಾರ 06.09.26
ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಗಣಿತ ಶಾಸ್ತ್ರ ಉಪನ್ಯಾಸಕರ ಒಂದು ದಿನದ ಕಾರ್ಯಾಗಾರದಲ್ಲಿ ಶ್ರೀರಾಮ ಪದವಿ ಪೂರ್ವ ವಿಭಾಗದ ಗಣಿತ ಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಜಯಲಕ್ಷ್ಮಿ ಭಾಗವಹಿಸಿರುತ್ತಾರೆ.

ಭಗೀರಥ ಮಾನವಿಕ ಸಂಘ 09.09.2026
ಪ್ಲಾಸ್ಟಿಕ್ ಮುಕ್ತ ಜಾಗೃತಿ ಕಾರ್ಯಕ್ರಮ. ಈ ಕಾರ್ಯಕ್ರಮವು ಗೊಳ್ತಮಜಲು ಗ್ರಾಮ ಪಂಚಾಯತ್, ಬಾಳ್ತಿಲ ಗ್ರಾಮ ಪಂಚಾಯತ್ ಹಾಗೂ ಲಯನ್ಸ್ ಕ್ಲಬ್ ಅಮ್ಟೂರು, ಹಸಿರು ದಳ ಮತ್ತು ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಸಹಯೋಗದೊಂದಿಗೆ ಪ್ಲಾಸ್ಟಿಕ್ ನಿಂದ ಸ್ವಾತಂತ್ರ್ಯದ ಬಗ್ಗೆ ಮಾಹಿತಿ ಮತ್ತು ಜಾಥಾವನ್ನು ನಡೆಸಲಾಯಿತು.

ಕಾರ್ಯಗಾರ 9.9.2026
ವಿದ್ಯಾಕೇಂದ್ರದ ಅಟಲ್ ಟಿಂಕರಿಂಗ್ ಪ್ರಯೋಗಾಲಯದಲ್ಲಿ ವಿವೇಕಾನಂದ ಪದವಿ ಕಾಲೇಜ್ ಪುತ್ತೂರಿನ ವಿಜ್ಞಾನ ವಿಭಾಗದ ಸಹಯೋಗದಲ್ಲಿ ಒಂದು ದಿನದ ವಿಜ್ಞಾನ ಕಾರ್ಯಗಾರವನ್ನು ಶ್ರೀಮತಿ ಸೌಮ್ಯ (ಗಣಿತ ಉಪನ್ಯಾಸಕಿ ವಿವೇಕಾನಂದ ಪದವಿ ಕಾಲೇಜು ಪುತ್ತೂರು) ದೀಪ ಬೆಳಗಿಸಿ ಭಾರತ ಮಾತೆಗೆ ಪುಷ್ಪಾರ್ಚನೆಗೈದು ಉದ್ಘಾಟಿಸಿದರು. ಪ್ರೌಢಶಾಲಾ ಮುಖ್ಯಗುರುಗಳಾದ ಗೋಪಾಲ್ ಶ್ರೀಮಾನ್ ವಿದ್ಯಾರ್ಥಿಗಳಿಗೆ ಅಟಲ್ ಪ್ರಯೋಗಾಲಯದ ಮಹತ್ವವನ್ನು ವಿವರಿಸಿದರು. 8ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಮತ್ತು ವಿವಿಧ ಚಟುವಟಿಕೆಗಳನ್ನು ವಿವೇಕಾನಂದ ಪದವಿ ಕಾಲೇಜಿನ ವಿಜ್ಞಾನ ವಿಭಾಗದ 23 ವಿದ್ಯಾರ್ಥಿಗಳು ನಡೆಸಿಕೊಟ್ಟರು. ಶ್ರೀರಾಮ ಪ್ರೌಢಶಾಲೆಯ 270 ವಿದ್ಯಾರ್ಥಿಗಳು ಭಾಗವಹಿಸಿದ್ದರು.

VISTAARA 2K26–COMMERCE FEST
(10.09.2026) ವಿದ್ಯಾರ್ಥಿಗಳು ತಯಾರಿಸಿದ ಎಟಿಎಂ ಮಾದರಿಯ ಮೂಲಕ ಹಣವನ್ನು ಡ್ರಾ ಮಾಡುವ ಮೂಲಕ ಫೆಸ್ಟ್ ವಿಶೇಷವಾಗಿ ಚಾಲನೆ ನೀಡಲಾಯಿತು. ವಿದ್ಯಾಕೇಂದ್ರದ ಸಂಸ್ಥಾಪಕರು, ಹಿರಿಯರು ಹಾಗೂ ಮಾರ್ಗದರ್ಶಕರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ಹಾಗೂ ಎಸ್‌ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮಂಗಳೂರು ಇದರ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಚೇತನ್ ರಾಜ್ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ ಮಾತನಾಡಿ, ಶ್ರೀ ಸಂತೋಷ್ ಬೇಂಕ್ಯ ವರದಿಗಾರರು ಹಾಗೂ ಗಾಯಕರು ಮತ್ತು ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಹಿರಿಯ ವಿದ್ಯಾರ್ಥಿ, ಶುಭ ಹಾರೈಸಿದರು. ಫೆಸ್ಟ್‌ನಲ್ಲಿ 10 ವಿದ್ಯಾಸಂಸ್ಥೆಗಳಿಂದ ಒಟ್ಟು 110 ವಿದ್ಯಾರ್ಥಿಗಳು ಹಾಗೂ 11 ಶಿಕ್ಷಕರು ಭಾಗವಹಿಸಿದ್ದರು

ಕಾರ್ಗಿಲ್ ವಿಜಯೋತ್ಸವ 10.9.2026 ಭಗೀರಥ ಮಾನವಿಕ ಸಂಘದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ–ಯ ಅಂಗವಾಗಿ ವಿದ್ಯಾರ್ಥಿಗಳಿಗೆ ದೇಶಭಕ್ತಿ, ರಾಷ್ಟ್ರಪ್ರೇಮ ಹಾಗೂ ಭಾರತೀಯ ಸೈನಿಕರ ತ್ಯಾಗ ಮತ್ತು ಸಾಹಸದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಮಂಗಳೂರಿನ ಕದ್ರಿ ವಾರ್ ಮೆಮೋರಿಯಲ್‌ಗೆ ಶೈಕ್ಷಣಿಕ ಭೇಟಿಯನ್ನು ಆಯೋಜಿಸಲಾಯಿತು. ವಿದ್ಯಾರ್ಥಿಗಳು ಮಂಗಳೂರಿನ ಕದ್ರಿ ವಾರ್ ಮೆಮೋರಿಯಲ್ ಹಾಗೂ ಟಿ–55 ಯುದ್ಧ ಟ್ಯಾಂಕ್ಅನ್ನು ವೀಕ್ಷಿಸಿದರು. ಕದ್ರಿ ವಾರ್ ಮೆಮೋರಿಯಲ್ನಲ್ಲಿ ದೇಶದ ರಕ್ಷಣೆಯಲ್ಲಿ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ಗೌರವ ಸಲ್ಲಿಸಲಾಯಿತು. ಅಲ್ಲಿರುವ ಸ್ಮಾರಕಗಳು ಹಾಗೂ ಯುದ್ಧದಲ್ಲಿ ಬಳಸಲಾದ ವಸ್ತುಗಳನ್ನು ವೀಕ್ಷಿಸುವ ಮೂಲಕ ವಿದ್ಯಾರ್ಥಿಗಳು ಭಾರತೀಯ ಸೈನಿಕರ ಶೌರ್ಯ, ತ್ಯಾಗ ಮತ್ತು ದೇಶಸೇವೆಯ ಮಹತ್ವವನ್ನು ಅರಿತುಕೊಂಡರು.

ವೈಟ್ ಲಿಫ್ಟಿಂಗ್ ಸ್ಪರ್ಧೆ 15.9.2026
ಶಾಲಾ ಶಿಕ್ಷಣ ಇಲಾಖೆ ಮತ್ತು ಬಧ್ರಿಯಾ ಪದವಿ ಪೂರ್ವ ಕಾಲೇಜು ಇದರ ಜಂಟಿ ಆಶ್ರಯದಲ್ಲಿ ನಡೆದ ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ, ಬಾಲಕರ ತಂಡವು ಒಟ್ಟು 139 ಅಂಕ ಗಳಿಸುವ ಮೂಲಕ ತೃತೀಯ ಸ್ಥಾನ ಪಡೆದುಕೊಂಡಿದೆ. ಅಭಿನಂದನೆಗಳು.

ಸ್ವದೇಶಿ ಸಪ್ತಾಹ 16.09.26
ಭರತ ವಿದ್ಯಾರ್ಥಿ ಸಂಘದ ವತಿಯಿಂದ ಸ್ವದೇಶಿ ಸಪ್ತಾಹದ ಅಂಗವಾಗಿ ಸ್ವದೇಶಿ ಮತ್ತು ವಿದೇಶಿ ವಸ್ತುಗಳ ಪ್ರದರ್ಶಿನಿಗಳನ್ನು ಡಾ। ಶ್ರುತಕೀರ್ತಿರಾಜ್, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರರು ಹಾಗೂ ಯಕ್ಷಗಾನ ಕಲಾವಿದರು ಉದ್ಘಾಟಿಸಿ, ಪ್ರದರ್ಶಿನಿಗಳನ್ನು ವೀಕ್ಷಿಸಿದರು. ದ್ವಿ. ವಾಣಿಜ್ಯ ವಿಭಾಗದ ಕು. ತೃಪ್ತಿ ಸ್ವದೇಶಿ ಸಪ್ತಾಹದ ಮಹತ್ವವನ್ನು ತಿಳಿಸಿದಳು. ಪ್ರಾಂಶುಪಾಲರು ಮತ್ತು ವಿದ್ಯಾರ್ಥಿ ಸಂಘದ ನಿರ್ದೇಶಕಿ ಶ್ರೀಮತಿ ಜಯಲಕ್ಷ್ಮೀ ಉಸಸ್ಥಿತರಿದ್ದರು.

ಜಾಗೃತಿ ಕಾರ್ಯಾಗಾರ 18.9.26

ಬಾಳಿಲ ಗ್ರಾಮ ಪಂಚಾಯತ್, ಶ್ರೀರಾಮ ಪ.ಪೂರ್ವ ಕಾಲೇಜು ಮತ್ತು ಹಸಿರು ದಳ ಮಂಗಳೂರು ಇದರ ಆಶ್ರಯದಲ್ಲಿ ವಿದ್ಯಾರ್ಥಿನಿಯರಿಗೆ ಸುಸ್ಥಿರ ಮುಟ್ಟಿನ ಪರ್ಯಾಯ ಬಳಕೆಗಳ ಬಗ್ಗೆ ಜಾಗೃತಿ ಮೂಡಿಸಲು ಋತುಚಕ್ರ ನಿರ್ವಹಣಾ ಕಾರ್ಯಾಗಾರವನ್ನು ಹಾಗೂ ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ಬಳಕೆಯ ಪರಿಣಾಮ ಮತ್ತು ಘನ ತ್ಯಾಜ್ಯ ನಿರ್ವಹಣಾ ಕಾರ್ಯದ ಬಗ್ಗೆ ಶ್ರೀಮತಿ ಪ್ರಿಯಾ, ಮೇಲ್ವಿಚಾರಕರು, ಪಾವೂರು ಗ್ರಾಮ ಪಂಚಾಯತ್ ಇವರು ಮಾಹಿತಿಯನ್ನು ನೀಡಿದರು. ಶ್ರೀಮತಿ ಭವ್ಯ, ಮೇಲ್ವಿಚಾರಕರು, ಬಾಳಿಲ ಗ್ರಾಮ ಪಂಚಾಯತ್ ಹಾಗೂ ಶ್ರೀ ಶಾಂತಪ್ಪ, ಮೇಲ್ವಿಚಾರಕರು, ಗೋಳ್ತಮಜಲು ಗ್ರಾಮ ಪಂಚಾಯತ್, ಶ್ರೀಮತಿ ವರ್ಷಿಣಿ ಮೇಲ್ವಿಚಾರಕರು ಗ್ರಾ.ಪಂಚಾಯತ್ ಕೊಣಾಜೆ, ಇವರು ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ತಿಳಿಸಿದರು.

COMMERCE OLYMPIAD 2026 19.9.26

ಭಾಮತೀ ವಾಣಿಜ್ಯ ಸಂಘದ ವತಿಯಿಂದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ **"COMMERCE OLYMPIAD 2026 – College Round"** ಪರೀಕ್ಷೆಯನ್ನು ಆಯೋಜಿಸಲಾಯಿತು. ಈ ಪರೀಕ್ಷೆಯನ್ನು **ASCA** ಮಾಲೀಕರಾದ ಶ್ರೀಮತಿ ಮಾನಸಾ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಪರೀಕ್ಷೆಯಲ್ಲಿ ಒಟ್ಟು 72 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಮೂಲಕ ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳ ವಿವರ: ಹಂಸಿತಾ ದ್ವಿತೀಯ ವಾಣಿಜ್ಯ ವಿಭಾಗ– Winner, ಸುಪ್ರೀತ್ – ದ್ವಿತೀಯ ವಾಣಿಜ್ಯವಿಭಾಗ – 1st Place ಜಿತೇಶ್ – ದ್ವಿತೀಯ ವಾಣಿಜ್ಯ ವಿಭಾಗ– 2nd Place, Winner ಆಗಿ ಆಯ್ಕೆಯಾದ ಹಂಸಿತಾ ಅವರು ಮಂಗಳೂರಿನಲ್ಲಿ ನಡೆಯಲಿರುವ "Grand Finale Round" ಗೆ ಆಯ್ಕೆಯಾಗಿದ್ದಾರೆ.

ಕರಾಟೆ ಸ್ಪರ್ಧೆ ದ್ವಿತೀಯ ಸ್ಥಾನ 19.9.2026

ಬಿ.ಎ. ಪದವಿ ಪೂರ್ವ ಕಾಲೇಜು ತುಂಬೆ, ಇಲ್ಲಿ ನಡೆದ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಮಂಥನ್ ಪೂಜಾರಿ 19ರ ವಯೋಮಾನದ ಬಾಲಕರ –82 ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಕಾರ್ಯಗಾರ 20.9.2026

ಪ್ರೇರಣಾ ಸಭಾಂಗಣ ಮಂಗಳೂರು ಇಲ್ಲಿ ನಡೆದ ಅರ್ಥಶಾಸ್ತ್ರ ಕಾರ್ಯಗಾರ ದಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ನವ್ಯಶ್ರೀ ಭಾಗವಹಿಸಿರುತ್ತಾರೆ.

ವಿದ್ಯಾರ್ಥಿ ಕಾವ್ಯ ವಿಹಾರ 22.09.2026 ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ, ದ. ಕ. ಜಿಲ್ಲಾ ಸಾಹಿತ್ಯ ಸಮಿತಿ. ಬಂಟ್ವಾಳ ತಾಲೂಕು ಸಾಹಿತ್ಯ ಸಮಿತಿ ಹಾಗೂ ಪ್ರತಿಭಾ ರಾಮ ಸಾಹಿತ್ಯ ಸಂಘ ಶ್ರೀ ರಾಮ ಪದವಿ ಪೂರ್ವ ವಿದ್ಯಾಲಯ ಕಲ್ಲಡ್ಕ ಇದರ ಸಹಯೋಗದಿಂದ ವಿದ್ಯಾರ್ಥಿ ಕವಿಗೋಷ್ಠಿ ಜರುಗಿತು. ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಟಿ. ವಾಣಿ ಶೆಟ್ಟಿ ದೀಪ ಬೆಳಗಿಸಿ ಉದ್ಘಾಟಿಸಿದರು. ಹಿರಿಯ ಸಾಹಿತಿ ಹಾಗೂ ನಿವೃತ್ತ ಅಧ್ಯಾಪಕರಾದ ಶ್ರೀ ವಿ. ಬಿ. ಕುಳಮರ್ವರವರು ಕಥೆ .ಕಾವ್ಯ. ಕವನ ಬರೆಯುವಾಗ ಅನುಸರಿಸಬೇಕಾದ ವಿಧಾನ ಛಂದಸ್ಸು, ಶಬ್ದಗಳ ಬಳಕೆ ವಿಷಯಗಳ ಪ್ರಸ್ತಾವನೆ ಇತ್ಯಾದಿ ವಿಷಯಗಳ ಬಗ್ಗೆ ಯುವ ಕವಿಗಳಿಗೆ ಮಾರ್ಗದರ್ಶನ ಮಾಡಿದರು. ಒಟ್ಟು 19 ವಿದ್ಯಾರ್ಥಿಗಳು ತಾವು ಬರೆದ ಕವನಗಳನ್ನು ವಾಚಿಸಿ ಸಂಭ್ರಮಿಸಿದರು. ವೇದಿಕೆಯಲ್ಲಿ ಪದವಿ ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀ ಯತಿ–ರಾಜ್, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ಜಿಲ್ಲಾ ಸಾಹಿತ್ಯ ಸಮಿತಿಯ ಲತೇಶ್ ಬಾಕ್ರಬೈಲ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಕವಿಗೋಷ್ಠಿಯಲ್ಲಿ ಭಾಗವಹಿಸಿದ ಎಲ್ಲಾ ಬಾಲ ಕವಿಗಳನ್ನು ಶಾಲು ಹೊದಿಸಿ. ಪುಸ್ತಕ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಅತಿಥಿಗಳ ಭೇಟಿ 23.9.2026

ಕಲಬುರಗಿಯ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಬಸವರಾಜ್ ಬೆನ್ನೂರ್ಕರ್ ಅವರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಜೊತೆಗೆ ಕಲಬುರಗಿಯ ಸಕ್ರಿಯ ರಾಜಕಾರಣಿ ಶ್ರೀ ಶಿವರಾಜ್ ಪಾಟೀಲ್ ಹುಳಿಗೆರೆ ಹಾಗೂ ಶ್ರೀಯುತ ಧನಶೆಟ್ಟಿ ಹೆಬ್ಬಾಳ, ಕಲಬುರಗಿ ಉಪಸ್ಥಿತರಿದ್ದರು. ವಿದ್ಯಾಕೇಂದ್ರದ ಸಹ ಕಾರ್ಯನಿರ್ವಹಣಾಧಿಕಾರಿ ಶ್ರೀ ರವಿರಾಜ್ ಕಣಂತೂರು ಹಾಗೂ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

ಹಿಂದಿ ದಿನದ ಆಚರಣೆ 24.09.2026

ಭಾರತಿ ಹಿಂದಿ ಸಂಘದ ವತಿಯಿಂದ ಆಚರಿಸಲಾದ ಹಿಂದಿ ದಿವಸ್ ಕಾರ್ಯಕ್ರಮದಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ, ಹಿಂದಿ ಶಿಕ್ಷಕಿ ದೀಪಿಕಾ ಮಿಶ್ರಾ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರಾದ ಅನುಶ್ರೀ ಹಾಗೂ ಶಮಾ ಹಿಂದಿ ಪ್ರೇರಣಾ ಗೀತೆಯನ್ನು ಹಾಡಿದರು. ಈ ಕಾರ್ಯಕ್ರಮದಲ್ಲಿ ಗಣಿತಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಜಯಲಕ್ಷ್ಮಿ ಹಾಗೂ ಹಿಂದಿ ಸಂಘದ ನಿರ್ದೇಶಕಿ ಅಶ್ವಿನಿ. ಎನ್ ಉಪಸ್ಥಿತರಿದ್ದರು.

ಅತಿಥಿಗಳ ಭೇಟಿ 25.9.2026

ಸರಸ್ವತಿ ವಂದನದಲ್ಲಿ ಗುಲ್ಬರ್ಗಾ ಹೈಕೋರ್ಟ್ ಪೀಠದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಗುಪ್ತ ಲಿಂಗ ಪಾಟೀಲ್ ಅವರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವೇದಿಕೆಯಲ್ಲಿ ವಿದ್ಯಾಕೇಂದ್ರದ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಹಾಗೂ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

ಮಾಸಿಕ ಭಜನೆ 25.9.2026

ದ್ವಿತೀಯ ವಿಜ್ಞಾನ ತರಗತಿಯ ವಿದ್ಯಾರ್ಥಿಗಳು ಮಾಸಿಕ ಭಜನೆ ನಡೆಸಿದರು ಹಾಗೂ ಸೆಪ್ಟಂಬರ್ ತಿಂಗಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮಾತಾಜಿಗಳು ಆರತಿ ಬೆಳಗಿ, ತಿಲಕಧಾರಣೆ ಮಾಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಶ್ರದ್ಧಾ ನಿಧಿ ಸಮರ್ಪಿಸಿದರು .

ರಾಜ್ಯಶಾಸ್ತ್ರ ವಿಷಯದ ಕಾರ್ಯಗಾರ 27.9.26

ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜ್ ಅಡ್ಯಾರ್ ನಲ್ಲಿ ರಾಜ್ಯಶಾಸ್ತ್ರ ವಿಷಯದ ಕಾರ್ಯಗಾರವು ನಡೆಯಿತು . ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ವಸಂತ ಬಲ್ಲಾಳ್ ಭಾಗವಹಿಸಿದರು.

ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ 26/9/2026–27/9/2026

ಶ್ರೀವಿದ್ಯಾರಣ್ಯ ಇಂಟರ್ ನ್ಯಾಷನಲ್ ಸ್ಕೂಲ್ ಹೈದರಬಾದ್ ಇಲ್ಲಿ ನಡೆದ ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಪಿ. ಯು . ಕಾಲೇಜಿನ ವಿದ್ಯಾರ್ಥಿಯಾದ ಪ್ರಜ್ವಲ್ ರೋಡ್ ರೇಸ್ –1 (ಸ್ಕಾಡ್) ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ತಾಲೂಕು ಮಟ್ಟದ ಫುಟ್ಬಾಲ್ ಪಂದ್ಯಾಟ

ಇಲಾಖೆಯ ವತಿಯಿಂದ ಸ.ಪ.ಪೂರ್ವ ಕಾಲೇಜು ಕನ್ಯಾನದಲ್ಲಿ ನಡೆದ ತಾಲೂಕು ಮಟ್ಟದ ಫುಟ್ಬಾಲ್ ಪಂದ್ಯಾಟದಲ್ಲಿ ಉತ್ತಮ ಪ್ರದರ್ಶನ ನೀಡಿ, ಮದನಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಪಂದ್ಯಾಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಬಾನೈಮ್‌ಫಾಂಗ್ ನಾಂಗ್ಟೆಟ್ ಮತ್ತು ಸ್ಟೆಮ್ಲಾಂಗ್ ಕುರ್ಬಾ ಭಾಗವಹಿಸುತ್ತಾರೆ.

ನಮಾಮಿ ಭಾರತ : 25/09/2026

ವಂದೇ ಮಾತರಂ ಸಾಮೂಹಿಕ ಗೀತ ಗಾಯನ ಕಾರ್ಯಕ್ರಮದಲ್ಲಿ ವಂದೇ ಮಾತರಂ ರಾಷ್ಟ್ರೀಯ ಗೀತೆಯ ಮಹತ್ವವನ್ನು ಇತಿಹಾಸ ಉಪನ್ಯಾಸಕರಾದ ರಮೇಶ್ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿಗಳಾದ ಶ್ರೀ ಸತೀಶ್ ಭಟ್ ಶಿವಗಿರಿ, ಪದವಿ ಪೂರ್ವ ವಿಭಾಗದ ಮಾತೃ ಭಾರತಿಯ ಸದಸ್ಯರಾದ ಶ್ರೀಮತಿ ಮಮತ, ಶ್ರೀಮತಿ ಹರ್ಷಿತಾ, ಶ್ರೀಮತಿ ಶ್ವೇತಾ ಹಾಗೂ ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ ಪದ್ಮನಾಭ ಉಪಸ್ಥಿತರಿದ್ದರು. 754 ಮಂದಿ ಭಾಗವಹಿದ್ದರು.

ಪದವಿ ವಿದ್ಯಾಲಯ

ಶಿಕ್ಷಕರ ದಿನಾಚರಣೆ ಕಾರ್ಯಕ್ರಮ 5.9.2026



ಪ್ರಣವ ವಿದ್ಯಾರ್ಥಿ ಸಂಘದ ವತಿಯಿಂದ ಶ್ರೀರಾಮ ಪ್ರಥಮ ದರ್ಜೆ ಮಹಾ ವಿದ್ಯಾಲಯದ ಪ್ರಣವ ವಿದ್ಯಾರ್ಥಿ ಸಂಘದ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಉಪನ್ಯಾಸಕ–ಉಪನ್ಯಾಸಕೇತರ ವೃಂದದವರ ಪಾದಪೂಜೆ ನೆರವೇರಿಸಿ ಗೌರವ ಸಮರ್ಪಿಸಿದರು. ಪದವಿಪೂರ್ವ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಶೈಲಿನಿ ಹಾಗೂ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ ಸಂಸ್ಕೃತ ಶಿಕ್ಷಕ ಶ್ರೀ ನಿರಂಜನ ಗೋಖಲೆ ಇವರು ಅಭ್ಯಾಗತರಾಗಿ ಆಗಮಿಸಿ ಶಿಕ್ಷಕರ ದಿನದ ಮಹತ್ವವನ್ನು ತಿಳಿಸಿದರು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾಲೇಜಿನ ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಉಪ ಪ್ರಾಂಶುಪಾಲರಾದ ಶ್ರೀ ಯತಿರಾಜ್ ಹಾಗೂ ಶ್ರೀಮತಿ ಸುಕನ್ಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂವಾದಾತ್ಮಕ ಅಧಿವೇಶನ ಮತ್ತು ಐಟಿ ಕ್ಲಬ್ ಲೋಗೋ ಅನಾವರಣ ಕಾರ್ಯಕ್ರಮ

2026ರ ಸೆಪ್ಟೆಂಬರ್ 8ರಂದು ಬಿಸಿಎ ವಿಭಾಗದ ವತಿಯಿಂದ ವರ್ಮ್ಯಾಟ್ರಿಕ್ಸ್ ಸಂಸ್ಥೆಯ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಅಪರ್ಣಾ ಆರ್. ಶೆಟ್ಟಿ ಹಾಗೂ ಸಾಫ್ಟ್‌ವೇರ್ ಡೆವಲಪರ್ ಶ್ರೀಮತಿ ಸ್ನೇಹಾ ರೈ ಅವರೊಂದಿಗೆ ಸಂವಾದಾತ್ಮಕ ಅಧಿವೇಶನ ಮತ್ತು ಐಟಿ ಕ್ಲಬ್ ಲೋಗೋ ಅನಾವರಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮವು ಉಪಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ ಸಿ., ಬಿಸಿಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ತೃಪ್ತಿ ಶೆಟ್ಟಿ, ಬೋಧಕ ವರ್ಗದವರು ಹಾಗೂ ಬಿಸಿಎ ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ನಡೆಯಿತು. ಈ ಅಧಿವೇಶನವು ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರದ ಕುರಿತು ಅಗತ್ಯವಾದ ಮಾಹಿತಿ, ಪ್ರಾಯೋಗಿಕ ಜ್ಞಾನ ಹಾಗೂ ವೃತ್ತಿಪರ ಕ್ಷೇತ್ರದ ಒಳನೋಟಗಳನ್ನು ಪಡೆಯಲು ಸಹಕಾರಿಯಾಯಿತು. ಲೋಗೋ ವಿನ್ಯಾಸ ಸ್ಪರ್ಧೆಯ ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಪ್ರಥಮ ಬಹುಮಾನ: ಯಕ್ಷಿತ್ ಮತ್ತು ಕಿರಣ್ – III ಬಿಸಿಎ, ದ್ವಿತೀಯ ಬಹುಮಾನ : ಜಯಸೂರ್ಯ ಮತ್ತು ಧನುಷ್ – III ಬಿಸಿಎ ತೃತೀಯ ಬಹುಮಾನ: ಆದಿ – I ಬಿಸಿಎ ಮತ್ತು ಪ್ರಕ್ಷೇಪ್ – II ಬಿಸಿಎ,

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ "ಭವಿಷ್" ವ್ಯಕ್ತಿತ್ವ ವಿಕಸನ ಕಾರ್ಯಕ್ರಮ 11.9.2026

ಪದವಿ ವಿಭಾಗದ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನ ಕುಮಾರಿಯವರು "ವ್ಯಕ್ತಿತ್ವ ವಿಕಸನದ ಮಹತ್ವ, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವ ವಿಧಾನಗಳು, ಸಮಯ ನಿರ್ವಹಣೆ, ಪರಿಣಾಮಕಾರಿ ಸಂವಹನ, ನಾಯಕತ್ವ ಗುಣಗಳು, ತಂಡದ ಕಾರ್ಯಚಟುವಟಿಕೆ ಮತ್ತು ಸಕಾರಾತ್ಮಕ ಮನೋಭಾವ"ದ ಕುರಿತು ಮಾರ್ಗದರ್ಶನ ನೀಡಿದರು. ಉಪಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ, ಸಂಯೋಜಕರಾದ ಶ್ರೀಮತಿ ಆಶಾಲತಾ ಮಾತಾಜಿ ಉಪಸ್ಥಿತರಿದ್ದರು. .

ಯಕ್ಷಗಾನ ಕಲಾವಿದೆ ಕು. ನಾಗಲತಾ ಅವರ ಸಂದರ್ಶನ 23.09.2026



ಆಕಾಶವಾಣಿ ಮಂಗಳೂರು ಇವರು ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಉಪನ್ಯಾಸಕಿ, ಯಕ್ಷಗಾನ ಕಲಾವಿದೆಯಾದ ನಾಗಲತಾ ಇವರ ಪ್ರತಿಭೆಯನ್ನು ಗುರುತಿಸಿ ನಡೆಸಿದ ಸಂದರ್ಶನದಲ್ಲಿ ಕು. ನಾಗಲತಾ ಇವರು ಪಾಲ್ಗೊಂಡು ತಮ್ಮ ಯಕ್ಷ ಪ್ರಯಾಣದ ಅನುಭವಗಳನ್ನು ಶ್ರೀ ಚಿಂತನ್ ವಿನ್ಯಾಸ್ ಅವರೊಂದಿಗೆ ಹಂಚಿಕೊಂಡಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಕುರಿತು ಮಾರ್ಗದರ್ಶನ 23.09.2026

ಆಂತರಿಕ ಗುಣಮಟ್ಟ ಭರವಸೆ ಕೋಶ (IQAC) ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತಾ ಘಟಕದ ಸಹಯೋಗದಲ್ಲಿ ಧನ್ವಂತರಿ ಸಭಾಂಗಣದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಕುರಿತು ಮಾರ್ಗದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀ ವಿಕಾಸ್ ಬಂಗೇರ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, IBPS, SBI, SSC, ರೈಲ್ವೆ ಹಾಗೂ ಇತರ ಸರ್ಕಾರಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ನೀಡಿದರು. ಪರೀಕ್ಷೆಗಳ ಅರ್ಹತೆ, ಪರೀಕ್ಷಾ ವಿಧಾನ, ಪಠ್ಯಕ್ರಮ ಹಾಗೂ ವಿವಿಧ ಉದ್ಯೋಗಾವಕಾಶಗಳ ಬಗ್ಗೆ ವಿವರಿಸಿದರು. ಶ್ರೀಮತಿ ಸುಕನ್ಯಾ ಮಾತಾಜಿ, ಉಪಪ್ರಾಂಶುಪಾಲರು, ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತಾ ಘಟಕದ ಸಂಯೋಜಕರಾದ ಕು. ರಂಜಿತಾ ಜಿ. ಹಾಗೂ ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು.

ಭವಿಷ್ ಘಟಕದ 22.09.2026

ಭವಿಷ್ ಘಟಕದ ವತಿಯಿಂದ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಮತ್ತು ಬರವಣಿಗೆಯ ಕೌಶಲ್ಯವನ್ನು ಬೆಳೆಸುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ರಾಷ್ಟ್ರೀಯ ಸೇವಾ ಯೋಜನಾ ದಿನ 24.9.26

"ರಾಷ್ಟ್ರೀಯ ಸೇವಾ ಯೋಜನಾ ದಿನ" ದಿನದ ಮಹತ್ವವನ್ನು ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀ ಯತಿರಾಜ್ ತಿಳಿಸಿದರು. ವೇದಿಕೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರು ವಿನುತಾ ಮಾತಾಜಿ ಹಾಗೂ ಸಹಸಂಯೋಜಕರು ಅಂಜನಾ ಮಾತಾಜಿ ಉಪಸ್ಥಿತರಿದ್ದರು.

ನಮಾಮಿ ಭಾರತಮ್ ವಂದೇ ಮಾತರಮ್ ಸಮೂಹ ಗಾಯನ ಕಾರ್ಯಕ್ರಮ: 25.09.2026

ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮ ದಿನದ ಪ್ರಯುಕ್ತ ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನದವರು ದೇಶದಾದ್ಯಂತ ಆಯೋಜಿಸಿದ ನಮಾಮಿ ಭಾರತಮ್ ವಂದೇ ಮಾತರಮ್ ಸಮೂಹ ಗಾಯನ ಕಾರ್ಯಕ್ರಮವು ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಅಜಿತ್ ಮುಲಾರ್ ಹಾಗೂ ಅಜಿತ್ ಕುಮಾರ್ ಉಪಸ್ಥಿತರಿದ್ದರು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕಾಲೇಜು ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಕಾರ್ಯಕ್ರಮದ ಮಹತ್ವ ತಿಳಿಸಿದರು. ಒಟ್ಟು 252 ಮಂದಿ ವಂದೇಮಾತರಂ ಗೀತೆಯನ್ನು ಹಾಡಿದರು.

ಅರ್ಥಶಾಸ್ತ್ರದ ವಿದ್ಯಾರ್ಥಿಗಳು ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ ಭಾಗಿ 26.09.2026

ಶ್ರೀ ಮಹಾವೀರ ಕಾಲೇಜು, ಮೂಡಬಿದ್ರೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅರ್ಥಶಾಸ್ತ್ರ ಒಕ್ಕೂಟದ ವತಿಯಿಂದ ಆಯೋಜಿಸಲಾದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಇಬ್ಬರು ಉಪನ್ಯಾಸಕರು ಹಾಗೂ ಕಲಾ ವಿಭಾಗದ ಹದಿಮೂರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ದಿನಾಂಕ 01.09.2026ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಸೈಂಟ್ ರೀಟಾ ಆಂಗ್ಲ ಮಾಧ್ಯಮ ಶಾಲೆ.ವಿಟ್ಲ ಇಲ್ಲಿ ನಡೆದ ಜಿಲ್ಲಾ ಮಟ್ಟದ ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ +79 ಕೆ.ಜಿ ವಿಭಾಗದಲ್ಲಿ 9ನೇ ತರಗತಿಯ ಜಾನ್ವಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ಚಕ್ರ ಎಸೆತ ರಾಷ್ಟ್ರ ಮಟ್ಟಕ್ಕೆ ಆಯ್ಕೆ



05.09.2026ರಿಂದ 07.09.2026 ರ ತನಕ ಹೈದರಾಬಾದ್ ನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕ್ರೀಡಾಕೂಟದಲ್ಲಿ 17ರ ವಯೋಮಾನದ ಬಾಲಕರ ವಿಭಾಗದಲ್ಲಿ 10ನೇ ತರಗತಿಯ ಸಂಕೀರ್ತ್ ಶೆಟ್ಟಿ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.



ಖೋ–ಖೋ ತಾಲೂಕು ಮಟ್ಟಕ್ಕೆ ಆಯ್ಕೆ 7.9.26

ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಪ್ರೌಢ ಶಾಲೆ ಮಾಣಿ ಇಲ್ಲಿ ನಡೆದ ಕಲ್ಲಡ್ಕ ವಲಯಮಟ್ಟದ ಖೋ ಖೋ ಪಂದ್ಯಾಟದಲ್ಲಿ ಶ್ರೀರಾಮ ಪ್ರೌಢಶಾಲೆಯ 17ರ ವಯೋಮಾನದ ಬಾಲಕರ ತಂಡವು ಪ್ರಥಮ ಸ್ಥಾನವನ್ನು ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



17ರ ವಯೋಮಾನದ ಬಾಲಕ ಬಾಲಕಿಯರು ಹಾಗೂ 14ರ ವಯೋಮಾನದ ಬಾಲಕರ ತಂಡವು ದ್ವಿತೀಯ ತಂಡ ಪ್ರಶಸ್ತಿಯನ್ನು ಪಡೆದಿದೆ. ಒಟ್ಟು 11 ಚಿನ್ನದ ಪದಕ, 17 ಬೆಳ್ಳಿಯ ಪದಕ, 14 ಕಂಚಿನ ಪದಕಗಳನ್ನು ಪಡೆದು–ಕೊಂಡಿರುತ್ತಾರೆ. 12 ವಿದ್ಯಾರ್ಥಿಗಳು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



ಕಬಡ್ಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆ 01.09.2026

ಸಾ. ಶಿ. ಇಲಾಖೆ ದ.ಕ.ಜಿ.ಪ. ಹಿರಿಯ ಪ್ರಾಥಮಿಕ ಶಾಲೆ ಬೋಳಂತೂರು ಇಲ್ಲಿ ನಡೆದ ಕಲ್ಲಡ್ಕ ವಲಯಮಟ್ಟದ ಕಬ್ಬಡಿ ಪಂದ್ಯಾಟದಲ್ಲಿ 14ರ ವಯೋಮಾನದ ಬಾಲಕರ ತಂಡ ತಾಲೂಕು ಮಟ್ಟಕ್ಕೆ ಹಾಗೂ ಜಿಲ್ಲಾ ಮಟ್ಟಕ್ಕೆ ಹಾಗೂ ಬಾಲಕಿಯರ ತಂಡ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದೆ. ಬಾಲಕರ ವಿಭಾಗದಲ್ಲಿ ಶ್ರೀಹಾನ್ ಉತ್ತಮ ರೈಡರ್ ಪ್ರಶಸ್ತಿಯನ್ನು, ಬಾಲಕಿಯರ ವಿಭಾಗದಲ್ಲಿ ಹರ್ಷಿಕ ಉತ್ತಮ ಹಿಡಿತಗಾರ್ತಿ ಪ್ರಶಸ್ತಿಯನ್ನು ಪಡೆದಿರುತ್ತಾರೆ.

ನಡಿಗೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ



05.09.2026ರಿಂದ 07.09.2026 ರ ತನಕ ಹೈದರಾಬಾದ್ ನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕ್ರೀಡಾಕೂಟದಲ್ಲಿ 17ರ ವಯೋಮಾನದ ಬಾಲಕರ ವಿಭಾಗದಲ್ಲಿ 10ನೇ ತರಗತಿಯ ಗುರುನಂದನ್ ರೈ 5km ನಡಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.



ವಾಲಿಬಾಲ್ ತಾಲೂಕು ಮಟ್ಟಕ್ಕೆ ಆಯ್ಕೆ 11.9.26

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಡಿಗ್ವಿಟಿ ಆಂಗ್ಲ ಮಾಧ್ಯಮ ಶಾಲೆ. ಕೊಡಾಜೆ ಇಲ್ಲಿ ನಡೆದ ಕಲ್ಲಡ್ಕ ವಲಯಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ 17ರ ವಯೋಮಾನದ ಬಾಲಕರ ತಂಡವು ದ್ವಿತೀಯ ಸ್ಥಾನವನ್ನು ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



ಕಬಡ್ಡಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ

ದಿನಾಂಕ 05.09.2026ರಿಂದ 07.09.2026 ರ ತನಕ ಹೈದರಾಬಾದ್ ನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ 14ರ ವಯೋಮಾನದ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ.

ನಡಿಗೆ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ದಿನಾಂಕ 05.09.2026ರಿಂದ 07.09.2026ರ ತನಕ ಹೈದರಾಬಾದ್ ನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕ್ರೀಡಾಕೂಟದಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ ಸ್ಪಂದನ 3km ನಡಿಗೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.



ಕ್ಷೇತ್ರೀಯ ಮಟ್ಟದ ಕಬಡ್ಡಿ ಪಂದ್ಯಾಟ

ಹೈದರಾಬಾದ್ ನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ 19ರ ವಯೋಮಾನದ ತರುಣ ವಿಭಾಗದಲ್ಲಿ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಬಾಲಕಿಯರ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ. ಬಂಟ್ವಾಳ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕಬಡ್ಡಿ ಪಂದ್ಯಾಟದಲ್ಲಿ (10.9.2026)ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಬಾಲಕಿಯರ ತಂಡವು ಪ್ರಥಮ ಸ್ಥಾನ ಪಡೆದಿದೆ.

ಸುಧೆಕ್ಕಾರುನಲ್ಲಿ ರಕ್ತೇಶ್ವರಿ ವನ ನಿರ್ಮಾಣ – 25.09.2026 ಮತ್ತು 26.09.206



ನಮಾಮಿ ಭಾರತ ನಿಮಿತ್ತ ಪದವಿ ವಿಭಾಗದ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ ಸುದೇಕಾರಿನಲ್ಲಿ ಎರಡು ದಿನ ಗಿಡ ನೆಡುವ ಶ್ರಮದಾನ ನಡೆಯಿತು ಒಟ್ಟು 65 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸುಮಾರು 400 ಗಿಡಗಳನ್ನು ಶ್ರಮದಾನ ಶ್ರಮದಾನ ಮೂಲಕ ನೆಟ್ಟರು, ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಮುಖ್ಯ ಕಾರ್ಯನಿರ್ವಹಣಾಧಿಕಾಧಿಕಾರಿ ಶ್ರೀ ಕೃಷ್ಣಪ್ರಸಾದ್, ಉಪಪ್ರಾಂಶುಪಾಲ ಶ್ರೀ ಯತಿರಾಜ್ ಹಾಗೂ ಎನ್.ಎಸ್.ಎಸ್ ಸಂಯೋಜಕರು ಉಪಸ್ಥಿತರಿದ್ದರು.

ವಿವಿಧ ವಿಭಾಗಗಳಲ್ಲಿ ಪೋಷಕರ ಸಭೆ














ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಾದ ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ಒಂದು ಗುಂಪಿನಲ್ಲಿ, ಪ್ರೌಢಶಾಲೆಯಲ್ಲಿ 10ನೇ ಮತ್ತು 8–9 ನೇ ತರಗತಿ ಪೋಷಕರಿಗೆ ಪ್ರತ್ಯೇಕ ಎರಡು ಗುಂಪಿನಲ್ಲಿ ಪದವಿ ಪೂರ್ವ ವಿಭಾಗದಲ್ಲಿ ಮೂರು ಗುಂಪುಗಳಲ್ಲಿ ಪ್ರತ್ಯೇಕ ದಿನಗಳಲ್ಲಿ ನಡೆಸಲಾಯಿತು. ಸಭೆಯಲ್ಲಿ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷರಾದ ಶ್ರೀ ಬಿ. ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸತೀಶ್ ಭಟ್ ಶಿವಗಿರಿ, ಶ್ರೀ ನಾಗೇಶ್ ಕಲ್ಲಡ್ಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಶ್ರೀ ರವಿರಾಜ್ ಕಣಂತೂರು, ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಪೋಷಕರಿಂದ ಅಭಿಪ್ರಾಯ ಕೇಳಲಾಯಿತು. ನಂತರ ಹಿರಿಯರು ಮಾರ್ಗದರ್ಶನ ಮಾಡಿದರು.

ನಮಾಮಿ ಭಾರತಮ್ – ವಂದೇ ಮಾತರಂ – ಸಮೂಹ ಗಾಯನ



ವಂದೇ ಮಾತರಂ 150 ಅಂಗವಾಗಿ ಅಖಿಲಭಾರತ ಶಿಕ್ಷಾ ಸಂಸ್ಥಾನ್ ಸಂಬಂಧಿತ ವಿದ್ಯಾಭಾರತಿ ಆಯೋಜಿಸಿರುವ ನಮಾಮಿ ಭಾರತ – ವಂದೇ ಮಾತರಂ ಸಮೂಹ ಗಾಯನ ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಕೇತರರು ಆಯಾ ವಿಭಾಗಗಳಲ್ಲಿ ದಿನಾಂಕ 25.09.2026 ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ವಂದೇ ಮಾತರಂ ಗೀತೆಯನ್ನು ಆಡಳಿತ ಮಂಡಳಿ ಸದಸ್ಯರು, ಅಭಿವೃದ್ಧಿ ಸಮಿತಿ ಸದಸ್ಯರು, ಮಾತೃಭಾರತಿ ಸದಸ್ಯರೊಂದಿಗೆ ಒಟ್ಟಿಗೆ ಸೇರಿ ಹಾಡಿದರು.

ಶುಭಕೋರುವ :

ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 8147249173

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ



ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9.5%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

KARKAN/2014/62363
Posted at Kalladka P.O. on 10th and 15th of Every month

Vol. : 13 Issue :5 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363